Re. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

It contains the text of 10 Acts (Kannada

**( EXTRAORDINARY )**

( ವಿಶೇಷ ಸಂಚಿಕೆ )


भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | | |
|---|---|---|---|
| सं. १ | नई दिल्ली, सोमवार, नवेंबर १६, २००९ | कार्तीक २५, १९३१ (शका) | खंड. ४१ |
| No. 1 | New Delhi, Monday, November 16, 2009 | Karthika 25, 1931 (Saka) | Vol. 41 |
| ಸಂ. ೧ | ನವ ದೆಹಲಿ, ಸೋಮವಾರ, ನವೆಂಬರ್ ೧೬, ೨೦೦೯ | ಕಾರ್ತೀಕ ೨೫, ೧೯೩೧ (ಶಕ) | ಸಂಪುಟ. ೪೧ |


**Ministry of Law and Justice**

(Legislative Department)

New Delhi, 16th November, 2009

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

**(ವಿಧಾಯೀ ಇಲಾಖೆ)**

**ನವದೆಹಲಿ, 16ನೇ ನವೆಂಬರ್, 2009**

The Translation in Kannada of the following Acts, namely :- (1) The Petroleum Act, 1934 (2) The Election Commission (Conditions of Service of Election Commissioners and Transaction of Business) Act, 1991 (3) The National Commission for Backward Classes Act, 1993 (4) The Lotteries (Regulation) Act, 1998 (5) The Advocates' Welfare Fund Act, 2001 (6) The Indian Council of World Affairs Act, 2001 (7) The Delimitation Act, 2002 (8) The Cigarettes and Other Tobacco Products (Prohibition of Advertisement and Regulation of Trade and Commerce, Production, Supply and Distribution) Act, 2003 (9) The Protection of Women from Domestic Violence Act, 2005 (10) The Prohibition of Child Marriage Act, 2006 - are hereby published under the authority of the President and shall be deemed to be authoritative texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು, ಎಂದರೆ :- (1) ಪೆಟ್ರೋಲಿಯಂ ಅಧಿನಿಯಮ, 1934 (2) ಚುನಾವಣಾ ಆಯೋಗ (ಚುನಾವಣಾ ಆಯುಕ್ತರುಗಳ ಸೇವಾ ಷರತ್ತುಗಳು ಮತ್ತು ವ್ಯವಹಾರ ನಿರ್ವಹಣೆ) ಅಧಿನಿಯಮ, 1991 (3) ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1993 (4) ಲಾಟರಿಗಳ (ವಿನಿಯಮನ) ಅಧಿನಿಯಮ, 1998 (5) ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 2001 (6) ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತು ಅಧಿನಿಯಮ, 2001 (7) ಸೀಮಾ ನಿರ್ಣಯ ಅಧಿನಿಯಮ, 2002 (8) ಸಿಗರೇಟುಗಳ ಮತ್ತು ಇತರ ತಂಬಾಕು ಉತ್ಪನ್ನಗಳ (ಜಾಹೀರಾತು ನಿಷೇಧ ಮತ್ತು ವ್ಯಾಪಾರ ಮತ್ತು ವಾಣಿಜ್ಯ, ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಯಮನ) ಅಧಿನಿಯಮ, 2003 (9) ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 (10) ಬಾಲ್ಯ ವಿವಾಹ ನಿಷೇಧ ಅಧಿನಿಯಮ, 2006 – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

Re. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

It Contains the text of 10 Acts (Kannada

**( EXTRAORDINARY )**

( ವಿಶೇಷ ಸಂಚಿಕೆ )

भाग IX अनुभाग 1

PART IX SECTION 1

ಭಾಗ IX ವಿಭಾಗ 1

प्राधिकार से प्रकाशित

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.


| | | | |
|---|---|---|---|
| सं. १ | नई दिल्ली, सोमवार, नवेंबर १६, २००९ | कार्तीक २५, १९३१ (शका) | खंड. ४१ |
| No. 1 | New Delhi, Monday, November 16, 2009 | Karthika 25, 1931 (Saka) | Vol. 41 |
| ಸಂ. ೧ | ನವ ದೆಹಲಿ, ಸೋಮವಾರ, ನವೆಂಬರ್ ೧೬, ೨೦೦೯ | ಕಾರ್ತೀಕ ೨೫, ೧೯೩೧ (ಶಕ) | ಸಂಪುಟ. ೪೧ |


**Ministry of Law and Justice**

(Legislative Department)

New Delhi, 16th November, 2009

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

**(ವಿಧಾಯೀ ಇಲಾಖೆ)**

**ನವದೆಹಲಿ, 16ನೇ ನವೆಂಬರ್, 2009**

The Translation in Kannada of the following Acts, namely :- (1) The Petroleum Act, 1934 (2) The Election Commission (Conditions of Service of Election Commissioners and Transaction of Business) Act, 1991 (3) The National Commission for Backward Classes Act, 1993 (4) The Lotteries (Regulation) Act, 1998 (5) The Advocates' Welfare Fund Act, 2001 (6) The Indian Council of World Affairs Act, 2001 (7) The Delimitation Act, 2002 (8) The Cigarettes and Other Tobacco Products (Prohibition of Advertisement and Regulation of Trade and Commerce, Production, Supply and Distribution) Act, 2003 (9) The Protection of Women from Domestic Violence Act, 2005 (10) The Prohibition of Child Marriage Act, 2006 - are hereby published under the authority of the President and shall be deemed to be authoritative texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು, ಎಂದರೆ :- (1) ಪೆಟ್ರೋಲಿಯಂ ಅಧಿನಿಯಮ, 1934 (2) ಚುನಾವಣಾ ಆಯೋಗ (ಚುನಾವಣಾ ಆಯುಕ್ತರುಗಳ ಸೇವಾ ಷರತ್ತುಗಳು ಮತ್ತು ವ್ಯವಹಾರ ನಿರ್ವಹಣೆ) ಅಧಿನಿಯಮ, 1991 (3) ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1993 (4) ಲಾಟರಿಗಳ (ವಿನಿಯಮನ) ಅಧಿನಿಯಮ, 1998 (5) ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 2001 (6) ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತು ಅಧಿನಿಯಮ, 2001 (7) ಸೀಮಾ ನಿರ್ಣಯ ಅಧಿನಿಯಮ, 2002 (8) ಸಿಗರೇಟುಗಳ ಮತ್ತು ಇತರ ತಂಬಾಕು ಉತ್ಪನ್ನಗಳ (ಜಾಹೀರಾತು ನಿಷೇಧ ಮತ್ತು ವ್ಯಾಪಾರ ಮತ್ತು ವಾಣಿಜ್ಯ, ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಯಮನ) ಅಧಿನಿಯಮ, 2003 (9) ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 (10) ಬಾಲ್ಯ ವಿವಾಹ ನಿಷೇಧ ಅಧಿನಿಯಮ, 2006 – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005

(2005ರ ಅಧಿನಿಯಮ ಸಂಖ್ಯೆ 43)

[ಸೆಪ್ಟೆಂಬರ್ 13, 2005]

ಕುಟುಂಬದೊಳಗೆ ಸಂಭವಿಸುವ ಯಾವುದೇ ಬಗೆಯ ಹಿಂಸೆಗೆ ಒಳಗಾದ ಮಹಿಳೆಯರಿಗೆ, ಸಂವಿಧಾನದ ಮೇರೆಗೆ ಖಾತರಿ ನೀಡಲಾದ ಮಹಿಳಾ ಹಕ್ಕುಗಳಿಗೆ ಹೆಚ್ಚು ಪರಿಣಾಮಕಾರಿ ರಕ್ಷಣೆ ನೀಡುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಆನುಷಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.

## ಅಧ್ಯಾಯ - I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು, ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 ಎಂದು ಕರೆಯತಕ್ಕದ್ದು.

(2) ಇದು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಬಾಧಿತ ವ್ಯಕ್ತಿ" ಎಂದರೆ ಎದುರುದಾರನೊಂದಿಗೆ ಕೌಟುಂಬಿಕ ಸಂಬಂಧ ಹೊಂದಿರುವ ಅಥವಾ ಹೊಂದಿದ್ದ ಮತ್ತು ಎದುರುದಾರನಿಂದ ಗೃಹ ಸಂಬಂಧೀ ಹಿಂಸೆಯ ಯಾವುದೇ ಕೃತ್ಯಕ್ಕೆ ಒಳಗಾಗಿರುವೆನೆಂದು ಆಪಾದಿಸುವ ಯಾರೇ ಮಹಿಳೆ;

(ಬಿ) "ಮಗು" ಎಂದರೆ ಹದಿನೆಂಟು ವರ್ಷದ ವಯಸ್ಸಿನೊಳಗಿನ ಯಾವನೇ ವ್ಯಕ್ತಿ ಎಂದು ಅರ್ಥ ಮತ್ತು ಅದು ಯಾವುದೇ ದತ್ತಕ ಮಗುವನ್ನು, ಮಲ ಮಗುವನ್ನು ಅಥವಾ ಸಾಕು ಮಗುವನ್ನು ಒಳಗೊಳ್ಳುತ್ತದೆ;

(ಸಿ) "ನಷ್ಟ ಪರಿಹಾರ ಆದೇಶ" ಎಂದರೆ 22ನೇ ಪ್ರಕರಣದ ಅನುಸಾರ ಮಾಡಿದ ಆದೇಶ ಎಂದು ಅರ್ಥ;

(ಡಿ) "ಅಭಿರಕ್ಷೆ ಆದೇಶ" ಎಂದರೆ 21ನೇ ಪ್ರಕರಣದ ಅನುಸಾರ ನೀಡಿದ ಆದೇಶ ಎಂದು ಅರ್ಥ;

(ಇ) "ಗೃಹ ಸಂಬಂಧೀ ಘಟನಾ ವರದಿ" ಎಂದರೆ ಬಾಧಿತ ವ್ಯಕ್ತಿಯಿಂದ ಗೃಹ ಸಂಬಂಧೀ ಹಿಂಸೆಯ ದೂರನ್ನು ಸ್ವೀಕರಿಸಿದ ಮೇಲೆ ನಿಯಮಿಸಲಾದ ನಮೂನೆಯಲ್ಲಿ ಸಲ್ಲಿಸಿದ ವರದಿ ಎಂದು ಅರ್ಥ;

(ಎಫ್) "ಗೃಹ ಸಂಬಂಧ" ಎಂದರೆ ರಕ್ತಸಂಬಂಧದ ಮೂಲಕ, ವಿವಾಹದ ಮೂಲಕ ಅಥವಾ ವಿವಾಹದ, ದತ್ತಕದ ಸ್ವರೂಪದಲ್ಲಿನ ಸಂಬಂಧದ ಮೂಲಕ ಅಥವಾ ಅವಿಭಕ್ತ ಕುಟುಂಬದ ಸದಸ್ಯರಾಗಿ ಒಟ್ಟಿಗೆ ವಾಸಿಸುವ ಕುಟುಂಬದ ಸದಸ್ಯರಾಗಿರುವಾಗ, ಸಾಮೂಹಿಕ ಕುಟುಂಬ ವಾಸದ ಮನೆಯಲ್ಲಿ ಒಟ್ಟಿಗೆ ವಾಸಿಸುತ್ತಿರುವ ಅಥವಾ ಯಾವುದೇ ನಿರ್ದಿಷ್ಟ ಕಾಲದಲ್ಲಿ ಒಟ್ಟಿಗೆ ವಾಸಿಸುತ್ತಿದ್ದ ಇಬ್ಬರು ವ್ಯಕ್ತಿಗಳ ನಡುವಿನ ಸಂಬಂಧ ಎಂದು ಅರ್ಥ;

(ಜಿ) "ಗೃಹ ಸಂಬಂಧೀ ಹಿಂಸೆ" ಎಂಬುದು, 3ನೇ ಪ್ರಕರಣದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರುತ್ತದೆ.

---

* ದಿನಾಂಕ: 26.10.2006 ರಂದು ಜಾರಿಗೆ ಬಂದಿದೆ. ಎಸ್.ಓ. 1776 (ಇ) ದಿನಾಂಕ: 17.10.2006ನ್ನು ನೋಡಿ.

(ಹೆಚ್) "ವರದಕ್ಷಿಣೆ" ಎಂಬ ಪದವು ವಧು ವರದಕ್ಷಿಣೆ ನಿಷೇಧ ಅಧಿನಿಯಮ, 1961 (1961ರ 28)ರ 2ನೇ ಪ್ರಕರಣದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ಐ) "ಮ್ಯಾಜಿಸ್ಟ್ರೇಟ್" ಎಂದರೆ ಬಾಧಿತ ವ್ಯಕ್ತಿಯು ತಾತ್ಕಾಲಿಕವಾಗಿ ಅಥವಾ ಅನ್ಯಥಾ ವಾಸಿಸುತ್ತಿರುವ ಅಥವಾ ಎದುರುದಾರನು ವಾಸಿಸುತ್ತಿರುವ ಅಥವಾ ಗೃಹ ಸಂಬಂಧೀ ಹಿಂಸೆ ನಡೆದಿದೆಯೆಂದು ಆಪಾದಿಸಿರುವ ಪ್ರದೇಶದಲ್ಲಿ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಮೇರೆಗೆ, ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವ ಸಂದರ್ಭಾನುಸಾರ, ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ಅಥವಾ ಮಹಾನಗರ ಮ್ಯಾಜಿಸ್ಟ್ರೇಟ್ ಎಂದು ಅರ್ಥ;

(ಜೆ) "ವೈದ್ಯಕೀಯ ಸೌಲಭ್ಯ" ಎಂದರೆ ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು ವೈದ್ಯಕೀಯ ಸೌಲಭ್ಯವೆಂದು ಅಧಿಸೂಚಿಸಬಹುದಾದಂಥ ಸೌಲಭ್ಯ ಎಂದು ಅರ್ಥ;

(ಕೆ) "ಹಣಕಾಸಿನ ಪರಿಹಾರ" ಎಂದರೆ ಈ ಅಧಿನಿಯಮದ ಮೇರೆಗೆ ಯಾವುದೇ ಪರಿಹಾರ ಕೋರುವ ಅರ್ಜಿಯ ವಿಚಾರಣೆಯ ಯಾವುದೇ ಹಂತದಲ್ಲಿ ಗೃಹ ಸಂಬಂಧೀ ಹಿಂಸೆಯ ಪರಿಣಾಮವಾಗಿ ಬಾಧಿತ ವ್ಯಕ್ತಿಯು ವಹಿಸಿದ ವೆಚ್ಚ ಮತ್ತು ಅನುಭವಿಸಿದ ನಷ್ಟಗಳನ್ನು ಭರಿಸುವುದಕ್ಕೆ ಬಾಧಿತ ವ್ಯಕ್ತಿಗೆ ಸಂದಾಯ ಮಾಡುವಂತೆ ಎದುರುದಾರನಿಗೆ ಮ್ಯಾಜಿಸ್ಟ್ರೇಟ್‌ರು ಆದೇಶಿಸಬಹುದಾದ ನಷ್ಟ ಪರಿಹಾರ ಎಂದು ಅರ್ಥ;

(ಎಲ್) "ಅಧಿಸೂಚನೆ" ಎಂದರೆ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ ಎಂದು ಅರ್ಥ ಮತ್ತು "ಅಧಿಸೂಚಿಸಿದ" ಎಂಬ ಅಭಿವ್ಯಕ್ತಿಯನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(ಎಂ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು ಎಂದು ಅರ್ಥ;

(ಎನ್) "ರಕ್ಷಣಾಧಿಕಾರಿ" ಎಂದರೆ 8ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ನೇಮಕ ಮಾಡಿದ ಅಧಿಕಾರಿ ಎಂದು ಅರ್ಥ;

(ಒ) "ರಕ್ಷಣಾದೇಶ" ಎಂದರೆ 18ನೇ ಪ್ರಕರಣದ ಅನುಸಾರವಾಗಿ ಮಾಡಿದ ಆದೇಶ ಎಂದು ಅರ್ಥ;

(ಪಿ) "ವಾಸದ ಆದೇಶ" ಎಂದರೆ 19ನೇ ಪ್ರಕರಣದ (1)ನೇ ಉಪ-ಪ್ರಕರಣದ ಅನುಸಾರ ನೀಡಿರುವ ಆದೇಶ ಎಂದು ಅರ್ಥ;

(ಕ್ಯೂ) "ಎದುರುದಾರ" ಎಂದರೆ ಬಾಧಿತ ವ್ಯಕ್ತಿಯೊಂದಿಗೆ ಗೃಹ ಸಂಬಂಧ ಹೊಂದಿರುವ ಅಥವಾ ಹೊಂದಿದ್ದ ಮತ್ತು ಬಾಧಿತ ವ್ಯಕ್ತಿಯು ಯಾರ ವಿರುದ್ಧ ಈ ಅಧಿನಿಯಮದ ಮೇರೆಗೆ ಯಾವುದೇ ಪರಿಹಾರ ಕೋರಿರುತ್ತಾಳೋ ಆ ಯಾವನೇ ವಯಸ್ಕ ಪುರುಷ ವ್ಯಕ್ತಿ ಎಂದು ಅರ್ಥ:

ಪರಂತು, ವಿವಾಹ ಸ್ವರೂಪದ ಸಂಬಂಧದಲ್ಲಿ ವಾಸಿಸುತ್ತಿರುವ ಬಾಧಿತ ಹೆಂಡತಿಯು ಅಥವಾ ಮಹಿಳೆಯು ಗಂಡನ ಸಂಬಂಧಿಯ ವಿರುದ್ಧ ಅಥವಾ ಪುರುಷ ಸಂಗಾತಿಯ ಸಂಬಂಧಿಯ ವಿರುದ್ಧವೂ ಸಹ ದೂರನ್ನು ಸಲ್ಲಿಸಬಹುದು;

(ಆರ್) "ಸೇವಾ ಸಂಸ್ಥೆ" ಎಂದರೆ 10ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನೋಂದಣಿಯಾಗಿರುವ ಸಂಸ್ಥೆ ಎಂದು ಅರ್ಥ;

(ಎಸ್) "ಸಾಮೂಹಿಕ ಕುಟುಂಬ ವಾಸದ ಮನೆ" ಎಂದರೆ ಬಾಧಿತ ವ್ಯಕ್ತಿಯು ಒಂಟಿಯಾಗಿ ಆಗಲಿ ಅಥವಾ ಎದುರುದಾರನ ಜೊತೆಯಲ್ಲಿ ಆಗಲಿ ಗೃಹ ಸಂಬಂಧದಲ್ಲಿ ವಾಸಿಸುತ್ತಿರುವ ಅಥವಾ ಯಾವುದೇ ಕಾಲದಲ್ಲಿ ವಾಸಿಸುತ್ತಿದ್ದ ಮನೆ ಎಂದು ಅರ್ಥ ಮತ್ತು ಬಾಧಿತ ವ್ಯಕ್ತಿಯು ಅಥವಾ ಎದುರುದಾರನು ಜಂಟಿಯಾಗಿ ಒಡೆತನ ಹೊಂದಿರುವ ಅಥವಾ ಬಾಡಿಗೆಗೆ ಪಡೆದಿರುವ ಅಥವಾ ಅವರಿಬ್ಬರಲ್ಲಿ ಒಬ್ಬರು ಒಡೆತನ ಹೊಂದಿರುವ ಅಥವಾ ಬಾಡಿಗೆಗೆ ಪಡೆದಿರುವ ಅದಕ್ಕೆ ಸಂಬಂಧಿಸಿದಂತೆ ಬಾಧಿತ ವ್ಯಕ್ತಿಯು ಅಥವಾ ಎದುರುದಾರನು ಅಥವಾ ಅವರಿಬ್ಬರೂ

ಜಂಟಿಯಾಗಿ ಅಥವಾ ಒಂಟಿಯಾಗಿ ಯಾವುದೇ ಹಕ್ಕನ್ನು, ಸ್ವಾಮ್ಯವನ್ನು, ಹಿತಾಸಕ್ತಿಯನ್ನು ಅಥವಾ ಈಕ್ವಿಟಿಯನ್ನು ಹೊಂದಿರುವಂಥ ವಾಸದ ಮನೆಯನ್ನು ಒಳಗೊಳ್ಳುತ್ತದೆ ಮತ್ತು ವಾಸದ ಮನೆಯಲ್ಲಿ ಎದುರುದಾರನು ಅಥವಾ ಬಾಧಿತ ವ್ಯಕ್ತಿಯು ಯಾವುದೇ ಹಕ್ಕನ್ನು, ಸ್ವಾಮ್ಯವನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರಲಿ ಅಥವಾ ಇಲ್ಲದಿರಲಿ ಎದುರುದಾರನು ಸದಸ್ಯನಾಗಿರುವ ಅವಿಭಕ್ತ ಕುಟುಂಬಕ್ಕೆ ಸೇರಿರಬಹುದಾದಂಥ ವಾಸದ ಮನೆಯನ್ನು ಒಳಗೊಳ್ಳುತ್ತದೆ.

(ಟಿ) **"ಆಶ್ರಯ ಮನೆ"** ಎಂದರೆ ರಾಜ್ಯ ಸರ್ಕಾರವು ಈ ಅಧಿನಿಯಮದ ಉದ್ದೇಶಗಳಿಗಾಗಿ ಆಶ್ರಯ ಮನೆಯೆಂದು ಅಧಿಸೂಚಿಸಬಹುದಾದಂಥ ಯಾವುದೇ ಆಶ್ರಯ ಮನೆ ಎಂದು ಅರ್ಥ;

## ಅಧ್ಯಾಯ – II

## ಗೃಹ ಸಂಬಂಧೀ ಹಿಂಸೆ

3. **ಗೃಹ ಸಂಬಂಧೀ ಹಿಂಸೆಯ ಪರಿಭಾಷೆ.**- ಈ ಅಧಿನಿಯಮದ ಉದ್ದೇಶಗಳಿಗಾಗಿ, ಎದುರುದಾರನ ಯಾವುದೇ ಕೃತ್ಯವು, ಲೋಪವು ಅಥವಾ ಕಾರ್ಯವು ಅಥವಾ ವರ್ತನೆಯು, ಅದರಿಂದ,-

(ಎ) ಬಾಧಿತ ವ್ಯಕ್ತಿಗೆ ಮಾನಸಿಕವಾಗಿಯಾಗಲಿ ಅಥವಾ ದೈಹಿಕವಾಗಿಯಾಗಲಿ ಹಾನಿಯುಂಟಾದರೆ ಅಥವಾ ಗಾಯವುಂಟಾದರೆ ಅಥವಾ ಅವಳ ಆರೋಗ್ಯ, ಸುರಕ್ಷೆ, ಜೀವನ, ಅವಯವ ಅಥವಾ ಉತ್ತಮ ಜೀವನಕ್ಕೆ ಅಪಾಯವುಂಟಾದರೆ ಅಥವಾ ಹಾಗೆ ಮಾಡುವ ಪ್ರವೃತ್ತಿ ಹೊಂದಿದ್ದರೆ ಮತ್ತು ದೈಹಿಕ ದುರುಪಯೋಗ, ಲೈಂಗಿಕ ದುರುಪಯೋಗ, ಬೈಗುಳ ಮತ್ತು ಭಾವನೆಗಳಿಗೆ ಘಾಸಿಯುಂಟಾದರೆ ಮತ್ತು ಆರ್ಥಿಕ ದುರುಪಯೋಗ ಉಂಟಾದರೆ ಅಥವಾ

(ಬಿ) ಯಾವುದೇ ವರದಕ್ಷಿಣೆಯನ್ನು ಅಥವಾ ಇತರ ಸ್ವತ್ತನ್ನು ಅಥವಾ ಬೆಲೆಬಾಳುವ ಭದ್ರತೆಗಾಗಿ ಯಾವುದೇ ಕಾನೂನುಬಾಹಿರ ಬೇಡಿಕೆಯನ್ನು ಈಡೇರಿಸುವಂತೆ ಬಾಧಿತ ವ್ಯಕ್ತಿಯನ್ನು ಅಥವಾ ಅವಳಿಗೆ ಸಂಬಂಧಪಟ್ಟ ಯಾರೇ ಇತರ ವ್ಯಕ್ತಿಯನ್ನು ಒತ್ತಾಯಪಡಿಸುವ ದೃಷ್ಟಿಯಿಂದ ಅವಳಿಗೆ ಕಿರುಕುಳ ಉಂಟಾದರೆ, ಹಾನಿಯುಂಟಾದರೆ, ಗಾಯವುಂಟಾದರೆ ಅಥವಾ ಜೀವಕ್ಕೆ ಅಪಾಯವುಂಟಾದರೆ ಅಥವಾ

(ಸಿ) (ಎ) ಅಥವಾ (ಬಿ) ಖಂಡದಲ್ಲಿ ಹೇಳಲಾದ ಯಾವುದೇ ವರ್ತನೆಯಿಂದ ಬಾಧಿತ ವ್ಯಕ್ತಿಯನ್ನು ಅಥವಾ ಅವಳಿಗೆ ಸಂಬಂಧಿಸಿದ ಯಾರೇ ವ್ಯಕ್ತಿಯನ್ನು ಬೆದರಿಸುವ ಪರಿಣಾಮ ಉಂಟಾದರೆ; ಅಥವಾ

(ಡಿ) ಬಾಧಿತ ವ್ಯಕ್ತಿಗೆ ದೈಹಿಕವಾಗಿಯಾಗಲಿ ಅಥವಾ ಮಾನಸಿಕವಾಗಿಯಾಗಲಿ ಅನ್ಯಥಾ ಗಾಯವುಂಟಾದರೆ ಅಥವಾ ನೋವುಂಟಾದರೆ

– ಗೃಹ ಸಂಬಂಧೀ ಹಿಂಸೆ ಆಗುತ್ತದೆ.

**ವಿವರಣೆ:**– 1. ಈ ಪ್ರಕರಣದ ಉದ್ದೇಶಗಳಿಗಾಗಿ,-

(i) "ದೈಹಿಕ ದುರುಪಯೋಗ" ಎಂದರೆ ಬಾಧಿತ ವ್ಯಕ್ತಿಗೆ ದೈಹಿಕ ನೋವನ್ನು, ಆಕೆಯ ಜೀವಕ್ಕೆ, ಅವಯವಕ್ಕೆ ಅಥವಾ ಆರೋಗ್ಯಕ್ಕೆ ಹಾನಿಯನ್ನು ಅಥವಾ ಅಪಾಯವನ್ನುಂಟುಮಾಡುವ ಅಥವಾ ಆಕೆಯ ಆರೋಗ್ಯ ಅಥವಾ ಬೆಳವಣಿಗೆಯನ್ನು ಕುಂಠಿತಗೊಳಿಸುವ ಸ್ವರೂಪದ ಯಾವುದೇ ಕೃತ್ಯ ಅಥವಾ ವರ್ತನೆ ಎಂದು ಅರ್ಥ ಮತ್ತು ಇದು ಹಲ್ಲೆಯನ್ನು, ಆಪರಾಧಿಕ ಭಯೋತ್ಪಾದನೆಯನ್ನು ಮತ್ತು ಆಪರಾಧಿಕ ಬಲ ಪ್ರಯೋಗವನ್ನು ಒಳಗೊಳ್ಳುತ್ತದೆ;

(ii) "ಲೈಂಗಿಕ ದುರುಪಯೋಗ"ವು ಮಹಿಳೆಯನ್ನು ದುರುಪಯೋಗಪಡಿಸಿಕೊಳ್ಳುವಂಥ, ಅವಮಾನಿಸುವಂಥ, ಹೀಯಾಳಿಸುವಂಥ ಅಥವಾ ಅನ್ಯಥಾ ಮಹಿಳೆಯ ಘನತೆಗೆ ಭಂಗ ತರುವಂಥ ಲೈಂಗಿಕ ಸ್ವರೂಪದ ಯಾವುದೇ ವರ್ತನೆಯನ್ನು ಒಳಗೊಳ್ಳುತ್ತದೆ:

(iii) "ಬೈಗುಳ ಮತ್ತು ಭಾವನೆಗಳಿಗೆ ಘಾಸಿ" ಎಂಬುದು ಈ ಮುಂದಿನವುಗಳನ್ನು ಒಳಗೊಳ್ಳುತ್ತದೆ:-

(ಎ) ಅಪಮಾನ, ಅಪಹಾಸ್ಯ, ಅವಮಾನ, ಅವಮರ್ಯಾದೆ ಮಾಡುವುದು ಮತ್ತು ಮಗುವನ್ನು ಅಥವಾ ಗಂಡು ಮಗುವನ್ನು ಹೆರದಿರುವುದಕ್ಕೆ ಸಂಬಂಧಿಸಿದಂತೆ ವಿಶೇಷವಾಗಿ ಅಪಮಾನ ಅಥವಾ ಅಪಹಾಸ್ಯ ಮಾಡುವುದು;

(ಬಿ) ಬಾಧಿತ ವ್ಯಕ್ತಿಯು ಯಾರ ವ್ಯಕ್ತಿಯಲ್ಲಿ ಆಸಕ್ತಿ ಹೊಂದಿರುವಳೋ ಆ ಯಾರೇ ವ್ಯಕ್ತಿಗೆ ದೈಹಿಕ ನೋವನ್ನುಂಟು ಮಾಡುವುದಾಗಿ ಪದೇ ಪದೇ ಬೆದರಿಕೆ ಹಾಕುವುದು;

(iv) "ಆರ್ಥಿಕ ದುರುಪಯೋಗ"ವು ಈ ಮುಂದಿನವುಗಳನ್ನು ಒಳಗೊಳ್ಳುತ್ತದೆ,-

(ಎ) ನ್ಯಾಯಾಲಯದ ಆದೇಶದ ಮೇರೆಗೆ ಸಂದಾಯ ಮಾಡಬೇಕಾದುದಾಗಿರಲಿ ಅಥವಾ ಅನ್ಯಥಾ ಸಂದಾಯ ಮಾಡಬೇಕಾದುದಾಗಿರಲಿ ಅಥವಾ ಬಾಧಿತ ವ್ಯಕ್ತಿಯ ಮತ್ತು ಆಕೆಯ ಮಕ್ಕಳು ಯಾರಾದರೂ ಇದ್ದರೆ, ಅವರ ಗೃಹಬಳಕೆಯ ಅವಶ್ಯಕತೆಗಳು, ಆದರೆ ಅವುಗಳಷ್ಟಕ್ಕೇ ಸೀಮಿತವಾಗದಂತೆ, ಸ್ತ್ರೀಧನ. ಬಾಧಿತ ವ್ಯಕ್ತಿಯ ಜಂಟಿ ಅಥವಾ ಒಂಟಿ ಒಡೆತನದಲ್ಲಿರುವ ಸ್ವತ್ತಿಗೆ, ಸಾಮೂಹಿಕ ಕುಟುಂಬ ವಾಸದ ಮನೆಗೆ ಸಂಬಂಧಪಟ್ಟಂತೆ ಬಾಡಿಗೆ ಸಂದಾಯ ಮತ್ತು ಜೀವನಾಂಶದ ನೀಡಿಕೆ ಸೇರಿದಂತೆ ಕಾನೂನಿನ ಅಥವಾ ರೂಢಿಯ ಮೇರೆಗೆ ಬಾಧಿತ ವ್ಯಕ್ತಿಯು ಹಕ್ಕು ಹೊಂದಿರುವ ಯಾವುದೇ ಅಥವಾ ಎಲ್ಲ ಆರ್ಥಿಕ ಅಥವಾ ಹಣಕಾಸಿನ ಸಂಪನ್ಮೂಲಗಳಿಂದ ವಂಚಿತಳನ್ನಾಗಿ ಮಾಡುವುದು;

(ಬಿ) ಬಾಧಿತ ವ್ಯಕ್ತಿಯು ಹಿತಾಸಕ್ತಿ ಹೊಂದಿರುವಂಥ ಅಥವಾ ಗೃಹ ಸಂಬಂಧಗಳ ಕಾರಣದಿಂದಾಗಿ ಬಳಕೆ ಮಾಡಿಕೊಳ್ಳಲು ಹಕ್ಕು ಹೊಂದಿರುವಂಥ ಅಥವಾ ಬಾಧಿತ ವ್ಯಕ್ತಿಗೆ ಅಥವಾ ಅವಳ ಮಕ್ಕಳಿಗೆ ಅಗತ್ಯವಾಗಿ ಬೇಕಾಗಿರುವಂಥ ಮನೆ ಬಳಕೆಯ ಸಾಮಗ್ರಿಗಳನ್ನು ವಿಲೆ ಮಾಡುವುದು, ಚರ ಅಥವಾ ಸ್ಥಿರ ಸ್ವತ್ತುಗಳನ್ನು, ಬೆಲೆ ಬಾಳುವ ವಸ್ತುಗಳನ್ನು, ಷೇರುಗಳನ್ನು, ಭದ್ರತಾಪತ್ರಗಳನ್ನು, ಬಾಂಡುಗಳನ್ನು ಅಥವಾ ಇತರ ಸ್ವತ್ತನ್ನು ಅಥವಾ ಸ್ತ್ರೀಧನವನ್ನು ಅಥವಾ ಬಾಧಿತ ವ್ಯಕ್ತಿಯು ಜಂಟಿಯಾಗಿ ಅಥವಾ ಒಂಟಿಯಾಗಿ ಹೊಂದಿರುವ ಯಾವುದೇ ಇತರ ಸ್ವತ್ತನ್ನು ಪರಭಾರೆ ಮಾಡುವುದು; ಮತ್ತು

(ಸಿ) ಸಾಮೂಹಿಕ ಕುಟುಂಬ ವಾಸದ ಮನೆಗೆ ಪ್ರವೇಶಿಸುವುದೂ ಸೇರಿದಂತೆ ಗೃಹ ಸಂಬಂಧಗಳ ಕಾರಣದಿಂದಾಗಿ ಬಾಧಿತ ವ್ಯಕ್ತಿಯು ಉಪಯೋಗಿಸಲು ಅಥವಾ ಅನುಭೋಗಿಸಲು ಹಕ್ಕು ಹೊಂದಿರುವ ಸಂಪನ್ಮೂಲಗಳನ್ನು ಉಪಯೋಗಿಸಲು ಅಥವಾ ಸೌಲಭ್ಯಗಳನ್ನು ಅನುಭೋಗಿಸಲು ನಿರಂತರವಾಗಿ ಪ್ರತಿಬಂಧಿಸುವುದು ಅಥವಾ ನಿರ್ಬಂಧಿಸುವುದು.

ವಿವರಣೆ II:- ಎದುರುದಾರನ ಯಾವುದೇ ಕೃತ್ಯವು, ಲೋಪವು, ಕಾರ್ಯವು ಅಥವಾ ವರ್ತನೆಯು ಈ ಪ್ರಕರಣದ ಮೇರೆಗೆ "ಗೃಹ ಸಂಬಂಧೀ ಹಿಂಸೆ" ಯಾಗುತ್ತದೆಯೇ ಎನ್ನುವುದನ್ನು ನಿರ್ಧರಿಸುವ ಉದ್ದೇಶಕ್ಕಾಗಿ, ಮೊಕದ್ದಮೆಯ ಸಮಗ್ರ ಸಂಗತಿಗಳನ್ನು ಮತ್ತು ಸನ್ನಿವೇಶಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

## ಅಧ್ಯಾಯ - III

## ರಕ್ಷಣಾಧಿಕಾರಿಗಳು, ಸೇವಾ ಸಂಸ್ಥೆಗಳು, ಮುಂತಾದವರ ಅಧಿಕಾರಗಳು ಮತ್ತು ಕರ್ತವ್ಯಗಳು

**4. ರಕ್ಷಣಾಧಿಕಾರಿಗೆ ಮಾಹಿತಿ ನೀಡುವುದು ಮತ್ತು ಮಾಹಿತಿದಾರನ ಹೊಣೆಗಾರಿಕೆಯನ್ನು ಹೊರತುಪಡಿಸುವುದು.-** (1) ಗೃಹ ಸಂಬಂಧೀ ಹಿಂಸಾಕೃತ್ಯವನ್ನು ಮಾಡಲಾಗಿದೆ ಅಥವಾ ಮಾಡಲಾಗುತ್ತಿದೆ ಅಥವಾ ಮಾಡುವ ಸಂಭವವಿದೆಯೆಂದು ನಂಬುವುದಕ್ಕೆ ಕಾರಣ ಹೊಂದಿರುವ ಯಾರೇ ವ್ಯಕ್ತಿಯು ಅದರ ಬಗ್ಗೆ ಸಂಬಂಧಪಟ್ಟ ರಕ್ಷಣಾಧಿಕಾರಿಗೆ ಮಾಹಿತಿ ನೀಡಬಹುದು.

(2) (1)ನೇ ಉಪ-ಪ್ರಕರಣದ ಉದ್ದೇಶಕ್ಕಾಗಿ ಸದ್ಭಾವನೆಯಿಂದ ಮಾಹಿತಿ ನೀಡಿದ್ದಕ್ಕಾಗಿ ಯಾರೇ ವ್ಯಕ್ತಿಯು ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ಹೊಣೆಗಾರಿಕೆಗೆ ಗುರಿಯಾಗತಕ್ಕದ್ದಲ್ಲ.

**5. ಪೊಲೀಸ್ ಅಧಿಕಾರಿಗಳ, ಸೇವಾ ಸಂಸ್ಥೆಗಳ ಮತ್ತು ಮ್ಯಾಜಿಸ್ಟ್ರೇಟನ ಕರ್ತವ್ಯಗಳು.-** ಗೃಹ ಸಂಬಂಧೀ ಹಿಂಸೆಯ ಬಗ್ಗೆ ದೂರನ್ನು ಸ್ವೀಕರಿಸಿರುವ ಪೊಲೀಸ್ ಅಧಿಕಾರಿ, ರಕ್ಷಣಾಧಿಕಾರಿ ಅಥವಾ ಮ್ಯಾಜಿಸ್ಟ್ರೇಟನು ಇಲ್ಲವೇ ಗೃಹ ಸಂಬಂಧೀ ಹಿಂಸೆ ನಡೆದ ಸ್ಥಳದಲ್ಲಿ ಅನ್ಯಥಾ ಹಾಜರಿದ್ದ ಅಥವಾ ಗೃಹ ಸಂಬಂಧೀ ಹಿಂಸೆಯ ಘಟನೆಯನ್ನು ತನಗೆ ವರದಿ ಮಾಡಿರುವಾಗ ಆ ಪೊಲೀಸ್ ಅಧಿಕಾರಿಯು, ರಕ್ಷಣಾಧಿಕಾರಿಯು, ಸೇವಾ ಸಂಸ್ಥೆಯು ಅಥವಾ ಮ್ಯಾಜಿಸ್ಟ್ರೇಟನು,-

(ಎ) ರಕ್ಷಣಾದೇಶವನ್ನು, ಹಣಕಾಸಿನ ಪರಿಹಾರಾದೇಶವನ್ನು, ಅಭಿರಕ್ಷೆ ಆದೇಶವನ್ನು, ವಾಸದ ಆದೇಶವನ್ನು, ನಷ್ಟ ಪರಿಹಾರ ಆದೇಶವನ್ನು ಅಥವಾ ಈ ಅಧಿನಿಯಮದ ಮೇರೆಗೆ ಅಂಥ ಒಂದಕ್ಕಿಂತ ಹೆಚ್ಚಿನ ಆದೇಶವನ್ನು ಪಡೆಯುವುದಕ್ಕಾಗಿ ಅರ್ಜಿ ಸಲ್ಲಿಸಲು ಅವಳಿಗೆ ಇರುವ ಹಕ್ಕಿನ ಬಗ್ಗೆ;

(ಬಿ) ಸೇವಾಸಂಸ್ಥೆಗಳ ಸೇವೆಗಳ ಲಭ್ಯತೆಯ ಬಗ್ಗೆ;

(ಸಿ) ರಕ್ಷಣಾಧಿಕಾರಿಗಳ ಸೇವೆಗಳ ಲಭ್ಯತೆಯ ಬಗ್ಗೆ;

(ಡಿ) ಕಾನೂನು ಸೇವಾ ಪ್ರಾಧಿಕಾರಗಳ ಅಧಿನಿಯಮ, 1987 (1987ರ 39)ರ ಮೇರೆಗೆ ಉಚಿತ ಕಾನೂನು ಸೇವೆಗಳನ್ನು ಪಡೆಯಲು ಆಕೆಗೆ ಇರುವ ಹಕ್ಕಿನ ಬಗ್ಗೆ;

(ಇ) ಭಾರತ ದಂಡ ಸಂಹಿತೆ (1860ರ 45)ಯ 498ಎ ಪ್ರಕರಣದ ಮೇರೆಗೆ ಅದು ಸಂಬಂಧಪಡುವಲ್ಲೆಲ್ಲಾ, ಫಿರ್ಯಾದನ್ನು ಸಲ್ಲಿಸಲು ಆಕೆಗೆ ಇರುವ ಹಕ್ಕಿನ ಬಗ್ಗೆ

- ಬಾಧಿತ ವ್ಯಕ್ತಿಗೆ ಮಾಹಿತಿ ನೀಡತಕ್ಕದ್ದು:

ಪರಂತು, ಈ ಅಧಿನಿಯಮದಲ್ಲಿರುವುದು ಯಾವುದೂ, ಸಂಜ್ಞೇಯ ಅಪರಾಧವು ನಡೆದಿರುವ ಬಗ್ಗೆ ಮಾಹಿತಿಯನ್ನು ಸ್ವೀಕರಿಸಿದ ಮೇಲೆ, ಕಾನೂನಿಗನುಸಾರವಾಗಿ ಮುಂದುವರೆಯುವ ತನ್ನ ಕರ್ತವ್ಯದಿಂದ ಪೊಲೀಸ್ ಅಧಿಕಾರಿಯನ್ನು ಬಿಡುಗಡೆಗೊಳಿಸುತ್ತದೆಂದು ಯಾವುದೇ ರೀತಿಯಲ್ಲಿ ಅರ್ಥಮಾಡತಕ್ಕದ್ದಲ್ಲ.

**6. ಆಶ್ರಯ ಮನೆಗಳಿಗೆ ಸಂಬಂಧಿಸಿದ ಕರ್ತವ್ಯಗಳು.-** ಬಾಧಿತ ವ್ಯಕ್ತಿಯು ಅಥವಾ ಅವಳ ಪರವಾಗಿ ರಕ್ಷಣಾಧಿಕಾರಿಯು ಅಥವಾ ಸೇವಾ ಸಂಸ್ಥೆಯು ಅವಳಿಗೆ ಆಶ್ರಯವನ್ನು ಒದಗಿಸುವುದಕ್ಕೆ ಆಶ್ರಯ ಮನೆಯ ಪ್ರಭಾರದಲ್ಲಿರುವ ವ್ಯಕ್ತಿಯನ್ನು ಕೋರಿದರೆ, ಆ ಆಶ್ರಯ ಮನೆಯ ಪ್ರಭಾರದಲ್ಲಿರುವ ಅಂಥ ವ್ಯಕ್ತಿಯು ಆ ಆಶ್ರಯ ಮನೆಯಲ್ಲಿ ಬಾಧಿತ ವ್ಯಕ್ತಿಗೆ ಆಶ್ರಯವನ್ನು ಒದಗಿಸತಕ್ಕದ್ದು.

**7. ವೈದ್ಯಕೀಯ ಸೌಲಭ್ಯಗಳಿಗೆ ಸಂಬಂಧಿಸಿದ ಕರ್ತವ್ಯಗಳು.-** ಬಾಧಿತ ವ್ಯಕ್ತಿಯು ಅಥವಾ ಅವಳ ಪರವಾಗಿ ರಕ್ಷಣಾಧಿಕಾರಿಯು ಅಥವಾ ಸೇವಾ ಸಂಸ್ಥೆಯು ಅವಳಿಗೆ ಯಾವುದೇ ವೈದ್ಯಕೀಯ ನೆರವನ್ನು ಒದಗಿಸುವುದಕ್ಕೆ ವೈದ್ಯಕೀಯ ಸೌಲಭ್ಯದ ಪ್ರಭಾರದಲ್ಲಿರುವ ವ್ಯಕ್ತಿಯನ್ನು ಕೋರಿದರೆ, ಆ ವೈದ್ಯಕೀಯ ಸೌಲಭ್ಯದ ಪ್ರಭಾರದಲ್ಲಿರುವ ಅಂಥ ವ್ಯಕ್ತಿಯು ಆ ವೈದ್ಯಕೀಯ ಸೌಲಭ್ಯದಲ್ಲಿನ ವೈದ್ಯಕೀಯ ನೆರವನ್ನು ಆ ಬಾಧಿತ ವ್ಯಕ್ತಿಗೆ ಒದಗಿಸತಕ್ಕದ್ದು.

**8. ರಕ್ಷಣಾಧಿಕಾರಿಗಳ ನೇಮಕ.-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಪ್ರತಿ ಜಿಲ್ಲೆಯಲ್ಲಿ ತಾನು ಅವಶ್ಯಕವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ರಕ್ಷಣಾಧಿಕಾರಿಗಳನ್ನು ನೇಮಿಸತಕ್ಕದ್ದು ಮತ್ತು ರಕ್ಷಣಾಧಿಕಾರಿಯು ಯಾವ ಪ್ರದೇಶದಲ್ಲಿ ಅಥವಾ ಪ್ರದೇಶಗಳೊಳಗೆ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅವನಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದೋ ಮತ್ತು ಕರ್ತವ್ಯಗಳನ್ನು ನೆರವೇರಿಸತಕ್ಕದ್ದೋ ಆ ಪ್ರದೇಶವನ್ನು ಅಥವಾ ಪ್ರದೇಶಗಳನ್ನು ಸಹ ಅಧಿಸೂಚಿಸತಕ್ಕದ್ದು.

(2) ಸಾಧ್ಯವಾದಷ್ಟು ಮಟ್ಟಿಗೆ ರಕ್ಷಣಾಧಿಕಾರಿಗಳು ಮಹಿಳೆಯರಾಗಿರತಕ್ಕದ್ದು ಮತ್ತು ಅವರು ನಿಯಮಿಸಬಹುದಾದಂಥ ಅರ್ಹತೆಗಳನ್ನು ಮತ್ತು ಅನುಭವವನ್ನು ಹೊಂದಿರತಕ್ಕದ್ದು.

(3) ರಕ್ಷಣಾಧಿಕಾರಿಯ ಮತ್ತು ಅವನಿಗೆ ಅಧೀನರಾದ ಇತರ ಅಧಿಕಾರಿಗಳ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

9. **ರಕ್ಷಣಾಧಿಕಾರಿಗಳ ಕರ್ತವ್ಯಗಳು ಮತ್ತು ಪ್ರಕಾರ್ಯಗಳು** – (1) ರಕ್ಷಣಾಧಿಕಾರಿಯ ಕರ್ತವ್ಯವು,-

(ಎ) ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಮ್ಯಾಜಿಸ್ಟ್ರೇಟನಿಗೆ ನೆರವಾಗುವುದು;

(ಬಿ) ಗೃಹ ಸಂಬಂಧೀ ಹಿಂಸೆಯ ದೂರನ್ನು ಸ್ವೀಕರಿಸಿದ ಮೇಲೆ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಮ್ಯಾಜಿಸ್ಟ್ರೇಟನಿಗೆ ಗೃಹ ಸಂಬಂಧೀ ಘಟನಾ ವರದಿಯನ್ನು ಸಲ್ಲಿಸುವುದು ಮತ್ತು ಗೃಹ ಸಂಬಂಧೀ ಹಿಂಸೆಯು ಯಾರ ಅಧಿಕಾರ ವ್ಯಾಪ್ತಿಯಲ್ಲಿ ನಡೆದಿದೆಯೆಂದು ಹೇಳಲಾಗಿದೆಯೋ ಆ ಸ್ಥಳೀಯ ಪರಿಮಿತಿಯೊಳಗಿನ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಪೊಲೀಸ್ ಅಧಿಕಾರಿಗೆ ಮತ್ತು ಆ ಪ್ರದೇಶದಲ್ಲಿನ ಸೇವಾ ಸಂಸ್ಥೆಗಳಿಗೆ ಅದರ ಪ್ರತಿಗಳನ್ನು ಕಳುಹಿಸುವುದು;

(ಸಿ) ಬಾಧಿತ ವ್ಯಕ್ತಿಯು ಹಾಗೆ ಇಚ್ಛಿಸಿದರೆ, ರಕ್ಷಣಾದೇಶ ನೀಡುವ ಮೂಲಕ ಪರಿಹಾರವನ್ನು ಕೋರಿ ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಮ್ಯಾಜಿಸ್ಟ್ರೇಟರಿಗೆ ಅರ್ಜಿಯನ್ನು ಸಲ್ಲಿಸುವುದು;

(ಡಿ) ಬಾಧಿತ ವ್ಯಕ್ತಿಗೆ ಕಾನೂನು ಸೇವಾ ಪ್ರಾಧಿಕಾರಗಳ ಅಧಿನಿಯಮ, 1987 (1987ರ 39)ರ ಮೇರೆಗೆ ಕಾನೂನು ನೆರವನ್ನು ಒದಗಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ನಿಯಮಿಸಲಾದ ಯಾವ ನಮೂನೆಯಲ್ಲಿ ಫಿರ್ಯಾದನ್ನು ಸಲ್ಲಿಸಬೇಕೋ ಆ ನಿಯಮಿಸಲಾದ ನಮೂನೆಯನ್ನು ಉಚಿತವಾಗಿ ಒದಗಿಸುವುದು;

(ಇ) ಮ್ಯಾಜಿಸ್ಟ್ರೇಟನ ಅಧಿಕಾರ ವ್ಯಾಪ್ತಿಯಲ್ಲಿನ ಸ್ಥಳೀಯ ಪ್ರದೇಶದಲ್ಲಿ ಕಾನೂನು ನೆರವು ಅಥವಾ ಸಲಹೆ, ಆಶ್ರಯ ಮನೆಗಳನ್ನು ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ ಎಲ್ಲಾ ಸೇವಾ ಸಂಸ್ಥೆಗಳ ಪಟ್ಟಿಯನ್ನು ಇಟ್ಟುಕೊಂಡು ಬರುವುದು;

(ಎಫ್) ಬಾಧಿತ ವ್ಯಕ್ತಿಗೆ ಸುರಕ್ಷಿತ ಆಶ್ರಯ ಮನೆಯ ಅಗತ್ಯವಿರುವಲ್ಲಿ ಆಶ್ರಯ ಮನೆಯನ್ನು ಒದಗಿಸುವುದು ಮತ್ತು ಆಶ್ರಯ ಮನೆಯಲ್ಲಿ ಆ ಬಾಧಿತ ವ್ಯಕ್ತಿಗೆ ವಸತಿ ಕಲ್ಪಿಸಿದ ಬಗ್ಗೆ ತನ್ನ ವರದಿಯ ಒಂದು ಪ್ರತಿಯನ್ನು ಆಶ್ರಯ ಮನೆ ಇರುವ ಪ್ರದೇಶದ ಅಧಿಕಾರ ವ್ಯಾಪ್ತಿ ಹೊಂದಿರುವ ಪೊಲೀಸ್ ಠಾಣೆಗೆ ಮತ್ತು ಮ್ಯಾಜಿಸ್ಟ್ರೇಟನಿಗೆ ಕಳುಹಿಸುವುದು;

(ಜಿ) ಬಾಧಿತ ವ್ಯಕ್ತಿಗೆ ದೈಹಿಕ ಗಾಯಗಳುಂಟಾಗಿದ್ದರೆ ಆಕೆಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸುವುದು ಮತ್ತು ವೈದ್ಯಕೀಯ ವರದಿಯ ಒಂದು ಪ್ರತಿಯನ್ನು ಗೃಹ ಸಂಬಂಧೀ ಹಿಂಸೆ ನಡೆದಿದೆಯೆಂದು ಹೇಳಲಾದ ಪ್ರದೇಶದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ಠಾಣೆಗೆ ಮತ್ತು ಮ್ಯಾಜಿಸ್ಟ್ರೇಟನಿಗೆ ಕಳುಹಿಸುವುದು;

(ಹೆಚ್) 20ನೇ ಪ್ರಕರಣದ ಮೇರೆಗೆ ಹಣಕಾಸಿನ ಪರಿಹಾರಕ್ಕಾಗಿ ಮಾಡಿದ ಆದೇಶವನ್ನು, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಮೇರೆಗೆ ನಿಯಮಿಸಲಾದ ಪ್ರಕ್ರಿಯೆಗಳ ಅನುಸಾರವಾಗಿ ಪಾಲನೆ ಮಾಡಲಾಗಿದೆ ಮತ್ತು ಜಾರಿ ಮಾಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು;

(ಐ) ನಿಯಮಿಸಬಹುದಾದಂಥ ಇತರ ಕರ್ತವ್ಯಗಳನ್ನು ನೆರವೇರಿಸುವುದು

– ಆಗಿರತಕ್ಕದ್ದು.

(2) ರಕ್ಷಣಾಧಿಕಾರಿಯು ಮ್ಯಾಜಿಸ್ಟ್ರೇಟನ ನಿಯಂತ್ರಣ ಮತ್ತು ಮೇಲ್ವಿಚಾರಣೆಯಲ್ಲಿರತಕ್ಕದ್ದು ಮತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಮ್ಯಾಜಿಸ್ಟ್ರೇಟನು ಮತ್ತು ಸರ್ಕಾರವು ಅವನಿಗೆ ವಹಿಸಿದ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

10. **ಸೇವಾಸಂಸ್ಥೆಗಳು.–** (1) ಈ ಬಗ್ಗೆ ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು, ಕಾನೂನು ನೆರವು, ವೈದ್ಯಕೀಯ, ಹಣಕಾಸು ಅಥವಾ ಇತರ ನೆರವನ್ನು ಒದಗಿಸುವುದೂ ಸೇರಿದಂತೆ ಯಾವುದೇ ಕಾನೂನುಬದ್ಧ ಸಾಧನಗಳ ಮೂಲಕ

ಮಹಿಳೆಯರ ಹಕ್ಕುಗಳನ್ನು ಮತ್ತು ಹಿತಾಸಕ್ತಿಗಳನ್ನು ರಕ್ಷಿಸುವ ಉದ್ದೇಶದಿಂದ ಸೊಸೈಟಿಗಳ ನೋಂದಣಿ ಅಧಿನಿಯಮ, 1860 (1860ರ 21)ರ ಮೇರೆಗೆ ನೋಂದಾಯಿತವಾದ ಯಾವುದೇ ಸ್ವಯಂಸೇವಾ ಸಂಸ್ಥೆ ಅಥವಾ ಕಂಪನಿಗಳ ಅಧಿನಿಯಮ, 1956 (1956ರ1)ರ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ನೋಂದಾಯಿತವಾದ ಕಂಪೆನಿಯು ಈ ಅಧಿನಿಯಮದ ಉದ್ದೇಶಗಳಿಗಾಗಿ ಸೇವಾ ಸಂಸ್ಥೆಯಾಗಿ ರಾಜ್ಯ ಸರ್ಕಾರದಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು.

(2) (1)ನೇ ಉಪ-ಪ್ರಕರಣದ ಮೇರೆಗೆ ನೋಂದಾಯಿತವಾದ ಸೇವಾ ಸಂಸ್ಥೆಯು,-

(ಎ) ಬಾಧಿತ ವ್ಯಕ್ತಿಯು ನಿಯಮಿಸಿದ ನಮೂನೆಯಲ್ಲಿ ಗೃಹ ಸಂಬಂಧೀ ಘಟನಾ ವರದಿಯನ್ನು ದಾಖಲಿಸಲು ಇಚ್ಛಿಸಿದರೆ ಹಾಗೆ ದಾಖಲಿಸಲು ಮತ್ತು ಗೃಹ ಸಂಬಂಧೀ ಹಿಂಸೆ ನಡೆದ ಪ್ರದೇಶದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟನಿಗೆ ಮತ್ತು ರಕ್ಷಣಾಧಿಕಾರಿಗೆ ಅದರ ಒಂದು ಪ್ರತಿಯನ್ನು ಕಳುಹಿಸಲು;

(ಬಿ) ಬಾಧಿತ ವ್ಯಕ್ತಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲು ಮತ್ತು ಗೃಹ ಸಂಬಂಧೀ ಹಿಂಸೆ ನಡೆದ ಸ್ಥಳೀಯ ಪರಿಮಿತಿಗಳಲ್ಲಿನ ರಕ್ಷಣಾಧಿಕಾರಿಗೆ ಮತ್ತು ಪೊಲೀಸ್ ಠಾಣೆಗೆ ಆ ವೈದ್ಯಕೀಯ ವರದಿಯ ಒಂದು ಪ್ರತಿಯನ್ನು ಕಳುಹಿಸಲು;

(ಸಿ) ಬಾಧಿತ ವ್ಯಕ್ತಿಯು ಹಾಗೇ ಅಗತ್ಯಪಡಿಸಿದರೆ ಆಶ್ರಯ ಮನೆಯಲ್ಲಿ ಆಶ್ರಯವನ್ನು ಒದಗಿಸಲಾಗಿದೆ ಎಂಬ ಬಗ್ಗೆ ಸುನಿಶ್ಚಿತಪಡಿಸಿಕೊಳ್ಳಲು ಮತ್ತು ಗೃಹ ಸಂಬಂಧೀ ಹಿಂಸೆ ನಡೆದ ಸ್ಥಳೀಯ ಪರಿಮಿತಿಗಳಲ್ಲಿನ ಪೊಲೀಸ್ ಠಾಣೆಗೆ ಬಾಧಿತ ವ್ಯಕ್ತಿಗೆ ಆಶ್ರಯ ಮನೆಯಲ್ಲಿ ವಸತಿ ಕಲ್ಪಿಸಿದ ಬಗ್ಗೆ ಒಂದು ವರದಿಯನ್ನು ಕಳುಹಿಸಲು

- ಅಧಿಕಾರವನ್ನು ಹೊಂದಿರತಕ್ಕದ್ದು.

(3) ಗೃಹ ಸಂಬಂಧೀ ಹಿಂಸೆ ನಡೆಯುವುದನ್ನು ತಡೆಯುವ ಬಗ್ಗೆ ಈ ಅಧಿನಿಯಮದ ಮೇರೆಗಿನ ಅಧಿಕಾರಗಳನ್ನು ಚಲಾಯಿಸುವಲ್ಲಿ ಅಥವಾ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ, ಈ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಮಾಡಿದ್ದಾನೆಂದು ತಾತ್ಪರ್ಯವಾಗುವ ಅಥವಾ ಮಾಡಿರುವನೆಂದು ಭಾವಿಸಲಾದ ಅಥವಾ ಮಾಡಿರುವನೆಂದು ತಾತ್ಪರ್ಯವಾಗಿದೆ ಎಂದು ಭಾವಿಸಲಾದ ಯಾವುದೇ ಸೇವಾ ಸಂಸ್ಥೆಯ ಅಥವಾ ಸೇವಾ ಸಂಸ್ಥೆಯ ಯಾವನೇ ಸದಸ್ಯನ ವಿರುದ್ಧ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

11. **ಸರ್ಕಾರದ ಕರ್ತವ್ಯಗಳು.**- ಕೇಂದ್ರ ಸರ್ಕಾರವು ಮತ್ತು ಪ್ರತಿಯೊಂದು ರಾಜ್ಯ ಸರ್ಕಾರವು,-

(ಎ) ಈ ಅಧಿನಿಯಮದ ಉಪಬಂಧಗಳಿಗೆ ದೂರದರ್ಶನ, ಆಕಾಶವಾಣಿ ಮತ್ತು ಮುದ್ರಣ ಮಾಧ್ಯಮವೂ ಸೇರಿದಂತೆ ಸಾರ್ವಜನಿಕ ಮಾಧ್ಯಮಗಳ ಮುಖಾಂತರ ನಿಯತ ಮಧ್ಯಂತರಗಳಲ್ಲಿ ವ್ಯಾಪಕ ಪ್ರಚಾರ ನೀಡಿರುವುದನ್ನು;

(ಬಿ) ಪೊಲೀಸ್ ಅಧಿಕಾರಿಗಳು ಮತ್ತು ನ್ಯಾಯಾಂಗ ಸೇವೆಗಳ ಸದಸ್ಯರೂ ಸೇರಿದಂತೆ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ಈ ಅಧಿನಿಯಮದಲ್ಲಿ ವಿವರಿಸಲಾದ ಸಮಸ್ಯೆಗಳ ಸಂವೇದನಾಶೀಲತೆಯನ್ನು ಮತ್ತು ಅರಿವಿನ ತರಬೇತಿಯನ್ನು ನಿಯತವಾಗಿ ನೀಡಿರುವುದನ್ನು;

(ಸಿ) ಗೃಹ ಸಂಬಂಧೀ ಹಿಂಸೆಯ ಸಮಸ್ಯೆಗಳನ್ನು ನಿವಾರಿಸುವಲ್ಲಿ ಸಂಬಂಧಪಟ್ಟ ಸಚಿವಾಲಯಗಳು ಮತ್ತು ಕಾನೂನು ಮತ್ತು ಸುವ್ಯವಸ್ಥೆ, ಆರೋಗ್ಯ ಮತ್ತು ಮಾನವ ಸಂಪನ್ಮೂಲಗಳು ಸೇರಿದಂತೆ ಗೃಹ ವ್ಯವಹಾರಗಳು ಮತ್ತು ಕಾನೂನನ್ನು ನಿರ್ವಹಿಸುವ ಇಲಾಖೆಗಳು ಒದಗಿಸುವ ಸೇವೆಗಳ ನಡುವೆ ಪರಿಣಾಮಕಾರಿ ಸಮನ್ವಯ ಸ್ಥಾಪಿಸುವ ಬಗ್ಗೆ ಮತ್ತು ಅದರ ನಿಯತಕಾಲಿಕ ಪುನರವಲೋಕನ ನಡೆಸಿರುವುದನ್ನು;

(ಡಿ) ನ್ಯಾಯಾಲಯಗಳೂ ಸೇರಿದಂತೆ ಈ ಅಧಿನಿಯಮದ ಮೇರೆಗೆ ಮಹಿಳೆಯರಿಗೆ ಸೇವೆಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದ ವಿವಿಧ ಮಂತ್ರಾಲಯಗಳಿಗೆ ಶಿಷ್ಟಾಚಾರ ನಿಯಮಾವಳಿಗಳನ್ನು ರೂಪಿಸಿರುವುದನ್ನು ಮತ್ತು ಜಾರಿಗೊಳಿಸಿರುವುದನ್ನು

- ಸುನಿಶ್ಚಿತಪಡಿಸಿಕೊಳ್ಳಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

## ಅಧ್ಯಾಯ – IV

### ಪರಿಹಾರಗಳ ಆದೇಶಗಳನ್ನು ಪಡೆಯುವುದಕ್ಕಾಗಿ ಪ್ರಕ್ರಿಯೆ

12. **ಮ್ಯಾಜಿಸ್ಟ್ರೇಟನಿಗೆ ಅರ್ಜಿ.–** (1) ಬಾಧಿತ ವ್ಯಕ್ತಿಯು ಅಥವಾ ಬಾಧಿತ ವ್ಯಕ್ತಿಯ ಪರವಾಗಿ ರಕ್ಷಣಾಧಿಕಾರಿಯು ಅಥವಾ ಯಾವನೇ ಇತರ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ಒಂದು ಅಥವಾ ಹೆಚ್ಚಿನ ಪರಿಹಾರಗಳನ್ನು ಕೋರಿ ಮ್ಯಾಜಿಸ್ಟ್ರೇಟನಿಗೆ ಅರ್ಜಿ ಸಲ್ಲಿಸಬಹುದು:

ಪರಂತು, ಅಂಥ ಅರ್ಜಿಯ ಮೇಲೆ ಯಾವುದೇ ಆದೇಶವನ್ನು ನೀಡುವ ಮುಂಚೆ, ಮ್ಯಾಜಿಸ್ಟ್ರೇಟನು ರಕ್ಷಣಾಧಿಕಾರಿಯಿಂದ ಅಥವಾ ಸೇವಾ ಸಂಸ್ಥೆಯಿಂದ ತಾನು ಪಡೆದ ಗೃಹ ಸಂಬಂಧೀ ಘಟನಾ ವರದಿಯನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

(2) (1)ನೇ ಉಪ–ಪ್ರಕರಣದ ಮೇರೆಗೆ ಕೋರಲಾದ ಪರಿಹಾರವು, ಎದುರುದಾರನು ಮಾಡಿದ ಗೃಹ ಸಂಬಂಧೀ ಹಿಂಸೆಯ ಕೃತ್ಯಗಳಿಂದ ಉಂಟಾದ ಹಾನಿಗೆ ನಷ್ಟ ಪರಿಹಾರಕ್ಕಾಗಿ ಅಥವಾ ಹಾನಿ ಪರಿಹಾರಗಳಿಗಾಗಿ ದಾವೆಯನ್ನು ಹೂಡಲು ಅಂಥ ವ್ಯಕ್ತಿಗೆ ಇರುವ ಹಕ್ಕಿಗೆ ಬಾಧಕವಾಗದಂತೆ ನಷ್ಟಪರಿಹಾರ ಅಥವಾ ಹಾನಿ ಪರಿಹಾರಗಳ ಸಂದಾಯಕ್ಕಾಗಿ ಆದೇಶವನ್ನು ಹೊರಡಿಸುವಂತೆ ಕೇಳುವ ಪರಿಹಾರವನ್ನು ಒಳಗೊಳ್ಳಬಹುದು:

ಪರಂತು, ಬಾಧಿತ ವ್ಯಕ್ತಿಯ ಪರವಾಗಿ ಯಾವುದೇ ನ್ಯಾಯಾಲಯವು ನಷ್ಟ ಪರಿಹಾರವಾಗಿ ಅಥವಾ ಹಾನಿಪರಿಹಾರವಾಗಿ ಯಾವುದೇ ಮೊಬಲಗಿಗೆ ಒಂದು ಡಿಕ್ರಿಯನ್ನು ಹೊರಡಿಸಿರುವಲ್ಲಿ, ಈ ಅಧಿನಿಯಮದ ಮೇರೆಗೆ ಮ್ಯಾಜಿಸ್ಟ್ರೇಟನು ಮಾಡಿದ ಆದೇಶದನುಸಾರವಾಗಿ ಸಂದಾಯವಾದ ಅಥವಾ ಸಂದಾಯವಾಗಬೇಕಾದ ಮೊಬಲಗು ಯಾವುದಾದರೂ ಇದ್ದರೆ, ಅದನ್ನು ಅಂಥ ಡಿಕ್ರಿಯ ಮೇರೆಗೆ ಸಂದಾಯವಾಗಬೇಕಾದ ಮೊಬಲಗಿನಲ್ಲಿ ವಜಾವಟ್ಟುಗೊಳಿಸತಕ್ಕದ್ದು ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಹಾಗೆ ವಜಾವಟ್ಟುಗೊಳಿಸಿದ ತರುವಾಯ ಯಾವುದಾದರೂ ಬಾಕಿ ಇದ್ದರೆ, ಆ ಮೊಬಲಗಿಗಾಗಿ ಡಿಕ್ರಿಯು ಜಾರಿಯಾದುದು ಆಗಿರತಕ್ಕದ್ದು.

(3) (1)ನೇ ಉಪ–ಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯು, ನಿಯಮಿಸಬಹುದಾದಂಥ ಅಥವಾ ಸಾಧ್ಯವಾದಷ್ಟು ಮಟ್ಟಿಗೆ ಅದಕ್ಕೆ ನಿಕಟವಾದಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅಂಥ ವಿವರಗಳನ್ನು ಒಳಗೊಂಡಿರತಕ್ಕದ್ದು.

(4) ಮ್ಯಾಜಿಸ್ಟ್ರೇಟನು ವಿಚಾರಣೆಯ ಪ್ರಥಮ ದಿನಾಂಕವನ್ನು ನಿಗದಿಪಡಿಸತಕ್ಕದ್ದು, ಅದು ನ್ಯಾಯಾಲಯವು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಸಾಮಾನ್ಯವಾಗಿ ಮೂರು ದಿನಗಳನ್ನು ಮೀರತಕ್ಕದ್ದಲ್ಲ.

(5) (1)ನೇ ಉಪ–ಪ್ರಕರಣದ ಮೇರೆಗೆ ಸಲ್ಲಿಸಿದ ಪ್ರತಿಯೊಂದು ಅರ್ಜಿಯನ್ನು ಅದರ ಪ್ರಥಮ ವಿಚಾರಣೆಯ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗಾಗಿ ವಿಲೆ ಮಾಡಲು ಮ್ಯಾಜಿಸ್ಟ್ರೇಟನು ಪ್ರಯತ್ನಿಸತಕ್ಕದ್ದು.

13. **ನೋಟೀಸನ್ನು ಜಾರಿ ಮಾಡುವುದು.–** (1) 12ನೇ ಪ್ರಕರಣದ ಮೇರೆಗೆ ನಿಗದಿಪಡಿಸಿದ ವಿಚಾರಣೆಯ ದಿನಾಂಕದ ನೋಟೀಸನ್ನು, ಅದನ್ನು ಸ್ವೀಕರಿಸಿದ ದಿನಾಂಕದಿಂದ ಗರಿಷ್ಠ ಎರಡು ದಿವಸಗಳ ಅವಧಿಯೊಳಗೆ ಅಥವಾ ಮ್ಯಾಜಿಸ್ಟ್ರೇಟನು ಅವಕಾಶ ನೀಡಬಹುದಾದಂಥ ಹೆಚ್ಚಿನ ಯುಕ್ತ ಕಾಲದೊಳಗೆ, ಮ್ಯಾಜಿಸ್ಟ್ರೇಟನು ನಿರ್ದೇಶಿಸಿದಂತೆ ಎದುರುದಾರನ ಮೇಲೆ ಮತ್ತು ಯಾರೇ ಇತರ ವ್ಯಕ್ತಿಯ ಮೇಲೆ ನಿಯಮಿಸಬಹುದಾದಂಥ ಸಾಧನಗಳ ಮೂಲಕ ಅದನ್ನು ಜಾರಿ ಮಾಡತಕ್ಕ ರಕ್ಷಣಾಧಿಕಾರಿಗೆ ಮ್ಯಾಜಿಸ್ಟ್ರೇಟನು ನೀಡತಕ್ಕದ್ದು.

(2) ನಿಯಮಿಸಬಹುದಾದಂಥ ನಮೂನೆಯಲ್ಲಿ ರಕ್ಷಣಾಧಿಕಾರಿಯು ಮಾಡಿದ ನೋಟೀಸಿನ ಜಾರಿಯ ಘೋಷಣೆಯು, ತದ್ವಿರುದ್ಧವಾದುದು ರುಜುವಾತಾದ ಹೊರತು, ಮ್ಯಾಜಿಸ್ಟ್ರೇಟನು ನಿರ್ದೇಶಿಸಿದಂತೆ ಎದುರುದಾರನ ಮೇಲೆ ಮತ್ತು ಯಾವನೇ ಇತರ ವ್ಯಕ್ತಿಯ ಮೇಲೆ ಅಂಥ ನೋಟೀಸನ್ನು ಜಾರಿ ಮಾಡಲಾಗಿದೆಯೆಂಬುದಕ್ಕೆ ರುಜುವಾತಾಗಿರತಕ್ಕದ್ದು.

**14. ಬುದ್ಧಿವಾದ.**– (1) ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳ ಯಾವುದೇ ಹಂತದಲ್ಲಿ, ಮ್ಯಾಜಿಸ್ಟ್ರೇಟನು, ನಿಯಮಿಸಬಹುದಾದಂಥ ಅರ್ಹತೆಗಳನ್ನು ಮತ್ತು ಬುದ್ಧಿವಾದ ಹೇಳುವುದರಲ್ಲಿ ಅನುಭವ ಹೊಂದಿರುವ ಸೇವಾ ಸಂಸ್ಥೆಯ ಯಾವನೇ ಸದಸ್ಯನೊಂದಿಗೆ ಒಂಟಿಯಾಗಿ ಅಥವಾ ಜೊತೆಯಾಗಿ ಸಮಾಲೋಚನೆಯಲ್ಲಿ ಭಾಗಿಯಾಗುವಂತೆ ಎದುರುದಾರನಿಗೆ ಅಥವಾ ಬಾಧಿತ ವ್ಯಕ್ತಿಗೆ ನಿರ್ದೇಶಿಸಬಹುದು.

(2) ಮ್ಯಾಜಿಸ್ಟ್ರೇಟನು (1)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ನಿರ್ದೇಶನವನ್ನು ನೀಡಿದ್ದಲ್ಲಿ, ಅವನು, ಎರಡು ತಿಂಗಳುಗಳನ್ನು ಮೀರದ ಅವಧಿಯೊಳಗೆ ಮೊಕದ್ದಮೆಯ ವಿಚಾರಣೆಯ ಮುಂದಿನ ದಿನಾಂಕವನ್ನು ನಿಗದಿಪಡಿಸತಕ್ಕದ್ದು.

**15. ಕಲ್ಯಾಣ ತಜ್ಞರ ನೆರವು.**– ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ, ಮ್ಯಾಜಿಸ್ಟ್ರೇಟನು, ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ತನಗೆ ನೆರವು ನೀಡುವ ಉದ್ದೇಶಕ್ಕಾಗಿ, ತಾನು ಸೂಕ್ತವೆಂದು ಭಾವಿಸಬಹುದಾದಂಥ, ಕುಟುಂಬ ಕಲ್ಯಾಣ ಸಂವರ್ಧನೆಯಲ್ಲಿ ನಿರತವಾಗಿರುವ ವ್ಯಕ್ತಿಯನ್ನು ಒಳಗೊಂಡಂತೆ, ಬಾಧಿತ ವ್ಯಕ್ತಿಗೆ ಸಂಬಂಧಿಯಾಗಿರಲಿ ಅಥವಾ ಇಲ್ಲದಿರಲಿ, ಮಹಿಳೆಗೆ ಆದ್ಯತೆ ನೀಡಿ, ಅಂಥ ವ್ಯಕ್ತಿಯ ಸೇವೆಗಳನ್ನು ಪಡೆಯಬಹುದು.

**16. ವ್ಯವಹರಣೆಗಳನ್ನು ರಹಸ್ಯವಾಗಿ ನಡೆಸುವುದು.**– ಪ್ರಕರಣದ ಸಂದರ್ಭಗಳು ವ್ಯವಹರಣೆಯನ್ನು ರಹಸ್ಯವಾಗಿ ನಡೆಸುವುದನ್ನು ಸಮರ್ಥಿಸುತ್ತಿವೆ ಎಂದು ಮ್ಯಾಜಿಸ್ಟ್ರೇಟನು ಭಾವಿಸಿದರೆ ಮತ್ತು ಆ ವ್ಯವಹರಣೆಗಳ ಎರಡೂ ಪಕ್ಷಕಾರರು ಅದನ್ನು ಇಚ್ಛಿಸಿದರೆ, ಅವನು ಆ ವ್ಯವಹರಣೆಗಳನ್ನು ರಹಸ್ಯವಾಗಿ ನಡೆಸಬಹುದು.

**17. ಸಾಮೂಹಿಕ ಕುಟುಂಬ ವಾಸದ ಮನೆಯಲ್ಲಿ ವಾಸಿಸಲು ಹಕ್ಕು.**– (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಗೃಹ ಸಂಬಂಧದಲ್ಲಿರುವ ಪ್ರತಿಯೊಬ್ಬ ಮಹಿಳೆಯು, ಸಾಮೂಹಿಕ ಕುಟುಂಬ ವಾಸದ ಮನೆಯಲ್ಲಿ ಅವಳಿಗೆ ಯಾವುದೇ ಹಕ್ಕು, ಸ್ವಾಮ್ಯ, ಪ್ರಯೋಜನಕಾರಿ ಹಿತಾಸಕ್ತಿ ಇರಲಿ ಅಥವಾ ಇಲ್ಲದಿರಲಿ, ಅಲ್ಲಿ ವಾಸಿಸಲು ಹಕ್ಕನ್ನು ಹೊಂದಿರತಕ್ಕದ್ದು.

(2) ಕಾನೂನಿನ ಮೂಲಕ ಸ್ಥಾಪಿತವಾದ ಪ್ರಕ್ರಿಯೆಗನುಸಾರವಾಗಿ ಹೊರತು, ಎದುರುದಾರನು, ಬಾಧಿತ ವ್ಯಕ್ತಿಯನ್ನು ಸಾಮೂಹಿಕ ಕುಟುಂಬ ವಾಸದ ಮನೆಯಿಂದ ಅಥವಾ ಅದರ ಯಾವುದೇ ಭಾಗದಿಂದ ಹೊರಹಾಕತಕ್ಕದ್ದಲ್ಲ ಅಥವಾ ಬೇರೆ ಇರಿಸತಕ್ಕದ್ದಲ್ಲ.

**18. ರಕ್ಷಣಾದೇಶಗಳು.**– ಮ್ಯಾಜಿಸ್ಟ್ರೇಟನು, ಬಾಧಿತ ವ್ಯಕ್ತಿಗೆ ಮತ್ತು ಎದುರುದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ತರುವಾಯ ಮತ್ತು ಗೃಹ ಸಂಬಂಧೀ ಹಿಂಸೆ ನಡೆದಿದೆ ಅಥವಾ ನಡೆಯುವ ಸಂಭವವಿದೆಯೆಂದು ಮೇಲುನೋಟಕ್ಕೆ ಮನವರಿಕೆಯಾದ ಮೇಲೆ, ಬಾಧಿತ ವ್ಯಕ್ತಿಯ ಪರವಾಗಿ ಮತ್ತು ಎದುರುದಾರನನ್ನು, ಅವನು,-

(ಎ) ಯಾವುದೇ ಗೃಹ ಸಂಬಂಧೀ ಹಿಂಸೆಯ ಕೃತ್ಯವನ್ನು ಮಾಡುವುದರಿಂದ;

(ಬಿ) ಗೃಹ ಸಂಬಂಧೀ ಹಿಂಸಾಕೃತ್ಯಗಳನ್ನು ಮಾಡುವುದಕ್ಕೆ ನೆರವಾಗುವುದರಿಂದ ಅಥವಾ ದುಷ್ಪ್ರೇರಿಸುವುದರಿಂದ;

(ಸಿ) ಬಾಧಿತ ವ್ಯಕ್ತಿಯ ಉದ್ಯೋಗದ ಸ್ಥಳಕ್ಕೆ ಪ್ರವೇಶಿಸುವುದರಿಂದ ಅಥವಾ ಬಾಧಿತ ವ್ಯಕ್ತಿಯು ಮಗುವಾಗಿದ್ದರೆ, ಆ ಮಗುವಿನ ಶಾಲೆಗೆ ಪ್ರವೇಶಿಸುವುದರಿಂದ ಅಥವಾ ಬಾಧಿತ ವ್ಯಕ್ತಿಯು ಆಗಾಗ್ಗೆ ಹೋಗಿಬರುವ ಯಾವುದೇ ಇತರ ಸ್ಥಳಕ್ಕೆ ಪ್ರವೇಶಿಸುವುದರಿಂದ;

(ಡಿ) ಬಾಧಿತ ವ್ಯಕ್ತಿಯನ್ನು ಖುದ್ದಾಗಿ, ಮೌಖಿಕವಾಗಿ ಅಥವಾ ಲಿಖಿತವಾಗಿ ಅಥವಾ ವಿದ್ಯುನ್ಮಾನ ಅಥವಾ ದೂರವಾಣಿ ಸಂಪರ್ಕವೂ ಒಳಗೊಂಡಂತೆ, ಎಂತಹುದೇ ಆಗಿರಲಿ, ಯಾವುದೇ ರೂಪದಲ್ಲಿ ಸಂಪರ್ಕಿಸುವುದಕ್ಕೆ ಪ್ರಯತ್ನಿಸುವುದರಿಂದ;

(ಇ) ಮ್ಯಾಜಿಸ್ಟ್ರೇಟನ ಅನುಮತಿಯಿಲ್ಲದೆ ಪಕ್ಷಕಾರರಿಬ್ಬರೂ ಬಳಸುತ್ತಿರುವ ಅಥವಾ ಹೊಂದಿರುವ ಅಥವಾ ಅನುಭವಿಸುತ್ತಿರುವ ಬ್ಯಾಂಕ್ ಲಾಕರುಗಳನ್ನು ಅಥವಾ ಬ್ಯಾಂಕ್ ಖಾತೆಗಳನ್ನು ಜಂಟಿಯಾಗಿ ಬಾಧಿತ ವ್ಯಕ್ತಿಯು ಮತ್ತು ಎದುರುದಾರನು

ಅಥವಾ ಒಂಟಿಯಾಗಿ ಎದುರುದಾರನು ನಿರ್ವಹಿಸುವುದರಿಂದ, ಪಕ್ಷಕಾರರಿಬ್ಬರೂ ಜಂಟಿಯಾಗಿಯಾಗಲಿ ಅಥವಾ ಒಂಟಿಯಾಗಿಯಾಗಲಿ ಹೊಂದಿರುವ ಸ್ತ್ರೀಧನ ಅಥವಾ ಯಾವುದೇ ಇತರೆ ಸ್ವತ್ತು ಸೇರಿದಂತೆ ಯಾವುದೇ ಸ್ವತ್ತುಗಳನ್ನು ಪರಭಾರೆ ಮಾಡುವುದರಿಂದ;

(ಎಫ್) ಅವಲಂಬಿತರಿಗೆ ಅಥವಾ ಇತರ ಸಂಬಂಧಿಕರಿಗೆ ಅಥವಾ ಗೃಹ ಸಂಬಂಧೀ ಹಿಂಸೆಯಿಂದ ಬಾಧಿತ ವ್ಯಕ್ತಿಗೆ ನೆರವು ನೀಡಿದ ಯಾವನೇ ವ್ಯಕ್ತಿಗೆ ಹಿಂಸೆಯನ್ನು ಉಂಟು ಮಾಡುವುದರಿಂದ;

(ಜಿ) ರಕ್ಷಣಾದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಯಾವುದೇ ಇತರ ಕೃತ್ಯವನ್ನು ಮಾಡುವುದರಿಂದ

– ಅವನನ್ನು ಪ್ರತಿಬಂಧಿಸಿ, ರಕ್ಷಣಾದೇಶವನ್ನು ಹೊರಡಿಸಬಹುದು.

**19. ವಾಸದ ಆದೇಶ.–** (1) 12ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗಿನ ಅರ್ಜಿಯನ್ನು ವಿಲೆ ಮಾಡುವಾಗ, ಮ್ಯಾಜಿಸ್ಟ್ರೇಟನು ಗೃಹ ಸಂಬಂಧೀ ಹಿಂಸೆ ನಡೆದಿದೆಯೆಂದು ತನಗೆ ಮನವರಿಕೆಯಾದ ಮೇಲೆ,–

(ಎ) ಸಾಮೂಹಿಕ ಕುಟುಂಬ ವಾಸದ ಮನೆಯಲ್ಲಿ ಎದುರುದಾರನು ಕಾನೂನುಬದ್ಧ ಅಥವಾ ನ್ಯಾಯಸಮ್ಮತ ಹಿತಾಸಕ್ತಿ ಹೊಂದಿರಲಿ ಅಥವಾ ಇಲ್ಲದಿರಲಿ, ಬಾಧಿತ ವ್ಯಕ್ತಿಯನ್ನು ಸಾಮೂಹಿಕ ಕುಟುಂಬ ವಾಸದ ಮನೆಯ ಸ್ವಾಧೀನ ತಪ್ಪಿಸುವುದರಿಂದ ಅಥವಾ ಯಾವುದೇ ಇತರ ರೀತಿಯಲ್ಲಿ ಸ್ವಾಧೀನತೆಗೆ ಭಂಗವನ್ನುಂಟು ಮಾಡುವುದರಿಂದ ಎದುರುದಾರನನ್ನು ಪ್ರತಿಬಂಧಿಸುವ;

(ಬಿ) ಸಾಮೂಹಿಕ ಕುಟುಂಬ ವಾಸದ ಮನೆಯಿಂದ ಆತನೇ ಹೊರಹೋಗುವಂತೆ ಎದುರುದಾರನಿಗೆ ನಿರ್ದೇಶಿಸುವ;

(ಸಿ) ಬಾಧಿತ ವ್ಯಕ್ತಿಯು ವಾಸ ಮಾಡುತ್ತಿರುವ ಸಾಮೂಹಿಕ ಕುಟುಂಬ ವಾಸದ ಮನೆಯ ಯಾವುದೇ ಭಾಗಕ್ಕೆ ಪ್ರವೇಶಿಸುವುದರಿಂದ ಎದುರುದಾರನನ್ನು ಮತ್ತು ಅವನ ಯಾರೇ ಸಂಬಂಧಿಕರನ್ನು ಪ್ರತಿಬಂಧಿಸುವ;

(ಡಿ) ಸಾಮೂಹಿಕ ಕುಟುಂಬ ವಾಸದ ಮನೆಯನ್ನು ಪರಭಾರೆ ಮಾಡುವುದರಿಂದ ಅಥವಾ ವಿಲೆ ಮಾಡುವುದರಿಂದ ಅಥವಾ ಅದನ್ನು ಋಣಭಾರಾಧಿಗೊಳಪಡಿಸುವುದರಿಂದ ಎದುರುದಾರನನ್ನು ಪ್ರತಿಬಂಧಿಸುವ;

(ಇ) ಮ್ಯಾಜಿಸ್ಟ್ರೇಟನ ಅನುಮತಿ ಪಡೆಯದೆ ಸಾಮೂಹಿಕ ಕುಟುಂಬ ವಾಸದ ಮನೆಯಲ್ಲಿ ಎದುರುದಾರನ ಹಕ್ಕುಗಳನ್ನು ಅವನು ತ್ಯಜಿಸುವುದರಿಂದ ಪ್ರತಿಬಂಧಿಸುವ; ಅಥವಾ

(ಎಫ್) ಸಾಮೂಹಿಕ ಕುಟುಂಬ ವಾಸದ ಮನೆಯಲ್ಲಿ ಬಾಧಿತ ವ್ಯಕ್ತಿಯು ಅನುಭೋಗಿಸಿದಂತಹುದೇ ಮಟ್ಟದ ಪರ್ಯಾಯ ವಸತಿಯನ್ನು ಆಕೆಗೆ ಒದಗಿಸುವುದಕ್ಕೆ ಅಥವಾ ಪರಿಸ್ಥಿತಿಗಳು ಅದನ್ನು ಅಗತ್ಯಪಡಿಸಿದರೆ, ಅದಕ್ಕೆ ಬಾಡಿಗೆಯನ್ನು ಸಂದಾಯ ಮಾಡುವುದಕ್ಕೆ ಎದುರುದಾರನಿಗೆ ನಿರ್ದೇಶಿಸುವ

– ವಾಸದ ಆದೇಶವನ್ನು ಹೊರಡಿಸಬಹುದು:

ಪರಂತು, (ಬಿ) ಖಂಡದ ಮೇರೆಗಿನ ಆದೇಶವನ್ನು ಮಹಿಳೆಯಾಗಿರುವ ಯಾರೇ ವ್ಯಕ್ತಿಯ ವಿರುದ್ಧ ಹೊರಡಿಸತಕ್ಕದ್ದಲ್ಲ.

(2) ಮ್ಯಾಜಿಸ್ಟ್ರೇಟನು, ಬಾಧಿತ ವ್ಯಕ್ತಿಗೆ ಅಥವಾ ಅಂಥ ಬಾಧಿತ ವ್ಯಕ್ತಿಯ ಯಾವುದೇ ಮಗುವಿಗೆ ರಕ್ಷಣೆ ಅಥವಾ ಸುರಕ್ಷತೆ ಒದಗಿಸುವುದು ಅಗತ್ಯವೆಂದು ಭಾವಿಸಬಹುದಾದರೆ ಯಾವುದೇ ಹೆಚ್ಚುವರಿ ಷರತ್ತುಗಳನ್ನು ವಿಧಿಸಬಹುದು ಅಥವಾ ಯಾವುದೇ ಇತರ ನಿರ್ದೇಶನವನ್ನು ನೀಡಬಹುದು.

(3) ಮ್ಯಾಜಿಸ್ಟ್ರೇಟನು, ಗೃಹಸಂಬಂಧೀ ಹಿಂಸೆಯ ಕೃತ್ಯವನ್ನು ತಡೆಯುವುದಕ್ಕಾಗಿ ಜಾಮೀನುದಾರರ ಸಹಿತ ಅಥವಾ ಜಾಮೀನುದಾರರು ಇಲ್ಲದೆ ಬಾಂಡನ್ನು ಬರೆದುಕೊಡಲು ಎದುರುದಾರನನ್ನು ಅಗತ್ಯಪಡಿಸಬಹುದು.

(4) (3)ನೇ ಉಪಪ್ರಕರಣದ ಮೇರೆಗಿನ ಆದೇಶವನ್ನು ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) VIIIನೇ ಅಧ್ಯಾಯದ ಮೇರೆಗಿನ ಆದೇಶವೆಂದು ಭಾವಿಸತಕ್ಕದ್ದು ಮತ್ತು ಅದರ ಬಗ್ಗೆ ತದನುಸಾರ ವ್ಯವಹರಿಸತಕ್ಕದ್ದು.

(5) (1)ನೇ ಉಪಪ್ರಕರಣದ, (2)ನೇ ಉಪಪ್ರಕರಣದ ಅಥವಾ (3)ನೇ ಉಪಪ್ರಕರಣದ ಮೇರೆಗೆ ಆದೇಶವನ್ನು ಹೊರಡಿಸುವಾಗ, ನ್ಯಾಯಾಲಯವು ಆ ಆದೇಶವನ್ನು ಅನುಷ್ಠಾನಗೊಳಿಸುವಲ್ಲಿ ಬಾಧಿತ ವ್ಯಕ್ತಿಗೆ ರಕ್ಷಣೆ ನೀಡುವಂತೆ ಅಥವಾ ಆಕೆಗೆ ಅಥವಾ ಆಕೆಯ ಪರವಾಗಿ ಅರ್ಜಿ ಸಲ್ಲಿಸುವ ವ್ಯಕ್ತಿಗೆ ನೆರವು ನೀಡುವಂತೆ ಸಮೀಪದ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಗೆ ನಿರ್ದೇಶಿಸಿ ಆದೇಶವನ್ನು ಸಹ ಹೊರಡಿಸಬಹುದು.

(6) (1)ನೇ ಉಪಪ್ರಕರಣದ ಮೇರೆಗೆ ಆದೇಶವನ್ನು ಹೊರಡಿಸುವಾಗ, ಮ್ಯಾಜಿಸ್ಟ್ರೇಟನು ಪಕ್ಷಕಾರರ ಹಣಕಾಸಿನ ಅಗತ್ಯತೆಗಳನ್ನು ಮತ್ತು ಸಂಪನ್ಮೂಲಗಳನ್ನು ಗಮನಿಸಿ ಬಾಡಿಗೆಯನ್ನು ಮತ್ತು ಇತರ ಸಂದಾಯಗಳನ್ನು ತೀರಿಸುವುದಕ್ಕೆ ಸಂಬಂಧಿಸಿದಂತೆ ಎದುರುದಾರನ ಮೇಲೆ ಬಾಧ್ಯತೆಗಳನ್ನು ಹೊರಿಸಬಹುದು.

(7) ರಕ್ಷಣಾದೇಶದ ಅನುಷ್ಠಾನದಲ್ಲಿ ನೆರವು ನೀಡಲು ಯಾವ ಮ್ಯಾಜಿಸ್ಟ್ರೇಟನನ್ನು ಕೋರಲಾಗಿದೆಯೋ ಆ ಮ್ಯಾಜಿಸ್ಟ್ರೇಟನ ಅಧಿಕಾರವ್ಯಾಪ್ತಿಯಲ್ಲಿರುವ ಪೊಲೀಸ್ ಠಾಣೆಯ ಪ್ರಭಾರಾಧಿಕಾರಿಗೆ ಆ ಮ್ಯಾಜಿಸ್ಟ್ರೇಟನು ನೆರವು ನೀಡಲು ನಿರ್ದೇಶಿಸಬಹುದು.

(8) ಬಾಧಿತ ವ್ಯಕ್ತಿಯ ಸ್ವಾಧೀನಕ್ಕೆ ಆಕೆಯ ಸ್ತ್ರೀಧನವನ್ನು ಅಥವಾ ಆಕೆಗೆ ಹಕ್ಕುಳ್ಳ ಯಾವುದೇ ಇತರ ಸ್ವತ್ತನ್ನು ಅಥವಾ ಬೆಲೆಬಾಳುವ ಭದ್ರತೆಯನ್ನು ಹಿಂದಿರುಗಿಸುವಂತೆ ಮ್ಯಾಜಿಸ್ಟ್ರೇಟನು ಎದುರುದಾರನಿಗೆ ನಿರ್ದೇಶಿಸಬಹುದು.

**20. ಹಣಕಾಸಿನ ಪರಿಹಾರಗಳು.**– (1) 12ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ವಿಲೇ ಮಾಡುವಾಗ, ಮ್ಯಾಜಿಸ್ಟ್ರೇಟನು, ಗೃಹ ಸಂಬಂಧೀ ಹಿಂಸೆಯ ಪರಿಣಾಮವಾಗಿ ಬಾಧಿತ ವ್ಯಕ್ತಿಗೆ ಮತ್ತು ಬಾಧಿತ ವ್ಯಕ್ತಿಯ ಯಾವುದೇ ಮಗುವಿಗೆ ತಗುಲಿದ ವೆಚ್ಚಗಳನ್ನು ಮತ್ತು ಅವರಿಗಾದ ನಷ್ಟಗಳನ್ನು ತುಂಬಿಕೊಡಲು ಹಣಕಾಸಿನ ಪರಿಹಾರವನ್ನು ಕೊಡುವಂತೆ ಎದುರುದಾರನಿಗೆ ನಿರ್ದೇಶಿಸಬಹುದು ಮತ್ತು ಅಂತಹ ಪರಿಹಾರವು ಕೆಳಕಂಡವುಗಳನ್ನು ಒಳಗೊಂಡಿರಬಹುದು ಆದರೆ, ಅವುಗಳಿಗೆ ಸೀಮಿತವಾಗಿರತಕ್ಕದ್ದಲ್ಲ,–

(ಎ) ಗಳಿಕೆಗಳ ನಷ್ಟ;

(ಬಿ) ವೈದ್ಯಕೀಯ ವೆಚ್ಚಗಳು;

(ಸಿ) ಬಾಧಿತ ವ್ಯಕ್ತಿಯ ನಿಯಂತ್ರಣದಲ್ಲಿರುವ ಯಾವುದೇ ಸ್ವತ್ತನ್ನು ನಾಶಪಡಿಸಿದ್ದರಿಂದ, ಅದಕ್ಕೆ ಹಾನಿ ಉಂಟು ಮಾಡಿದ್ದರಿಂದ ಅಥವಾ ಅದನ್ನು ತೆಗೆದುಕೊಂಡು ಹೋಗಿದ್ದರಿಂದ ಉಂಟಾದ ನಷ್ಟ; ಮತ್ತು

(ಡಿ) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 125ನೇ ಪ್ರಕರಣದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗಿನ ಜೀವನಾಂಶ ಆದೇಶದ ಮೇರೆಗೆ ಅಥವಾ ಅದಕ್ಕೆ ಹೆಚ್ಚಿಗೆಯಾದ ಆದೇಶವನ್ನೊಳಗೊಂಡಂತೆ ಬಾಧಿತ ವ್ಯಕ್ತಿಯ ಮತ್ತು ಆಕೆಯ ಮಕ್ಕಳು ಯಾರಾದರೂ ಇದ್ದರೆ ಅವರ ಜೀವನಾಂಶ.

(2) ಈ ಪ್ರಕರಣದ ಮೇರೆಗೆ, ನೀಡಲಾದ ಹಣಕಾಸಿನ ಪರಿಹಾರವು ಸಾಕಷ್ಟಿರತಕ್ಕದ್ದು, ನ್ಯಾಯಯುತವಾಗಿರತಕ್ಕದ್ದು ಮತ್ತು ಯುಕ್ತವಾಗಿರತಕ್ಕದ್ದು ಮತ್ತು ಬಾಧಿತ ವ್ಯಕ್ತಿಯು ರೂಢಿಸಿಕೊಂಡಿದ್ದ ಜೀವನ ಮಟ್ಟಕ್ಕೆ ಸರಿಹೊಂದುವಂತಿರತಕ್ಕದ್ದು.

(3) ಮ್ಯಾಜಿಸ್ಟ್ರೇಟನು, ಮೊಕದ್ದಮೆಯ ಸ್ವರೂಪ, ಪರಿಸ್ಥಿತಿಗಳು ಅಗತ್ಯಪಡಿಸಬಹುದಾದಂತೆ ಜೀವನಾಂಶವನ್ನು ಸೂಕ್ತ ಇಡಿಗಂಟಿನಲ್ಲಿ ಪಾವತಿ ಮಾಡಲು ಅಥವಾ ಮಾಸಿಕವಾಗಿ ಪಾವತಿಸುವಂತೆ ಆದೇಶಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(4) ಮ್ಯಾಜಿಸ್ಟ್ರೇಟನು, (1)ನೇ ಉಪಪ್ರಕರಣದ ಮೇರೆಗೆ ಹಣಕಾಸಿನ ಪರಿಹಾರಕ್ಕಾಗಿ ಮಾಡಿದ ಆದೇಶದ ಪ್ರತಿಯನ್ನು ಅರ್ಜಿ ಸಲ್ಲಿಸಿದ ಪಕ್ಷಕಾರರಿಗೆ ಮತ್ತು ಎದುರುದಾರ ವಾಸವಿರುವ ಪ್ರದೇಶದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗಿನ ಪೊಲೀಸ್ ಠಾಣೆಯ ಪ್ರಭಾರಾಧಿಕಾರಿಗೆ ಕಳುಹಿಸತಕ್ಕದ್ದು.

(5) (1)ನೇ ಉಪಪ್ರಕರಣದ ಮೇರೆಗಿನ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಬಾಧಿತ ವ್ಯಕ್ತಿಗೆ ಮಂಜೂರು ಮಾಡಿದ ಹಣಕಾಸಿನ ಪರಿಹಾರವನ್ನು ಎದುರುದಾರನು ಸಂದಾಯ ಮಾಡತಕ್ಕದ್ದು.

(6) (1)ನೇ ಉಪಪ್ರಕರಣದ ಮೇರೆಗಿನ ಆದೇಶದ ನಿಬಂಧನೆಗಳಿಗನುಸಾರವಾಗಿ ಪಾವತಿ ಮಾಡಲು ಎದುರುದಾರನು ವಿಫಲನಾದಲ್ಲಿ, ಮ್ಯಾಜಿಸ್ಟ್ರೇಟನು, ಎದುರುದಾರನು ಸಂದಾಯ ಮಾಡಬೇಕಾದ ಹಣಕಾಸಿನ ಪರಿಹಾರಕ್ಕೆ ಸಂಬಂಧಿಸಿದಂತೆ ಹೊಂದಾಣಿಕೆ ಮಾಡಬಹುದಾದಂಥ ಮೊಬಲಗನ್ನು, ಎದುರುದಾರನ ಪಾಲಿಗೆ ಬರಬೇಕಾದ ಅಥವಾ ಅವನಿಗೆ ಪ್ರಾಪ್ತವಾಗಬೇಕಾದ ಮಜೂರಿಗಳ ಅಥವಾ ವೇತನಗಳ ಅಥವಾ ಋಣದ ಭಾಗವೊಂದನ್ನು ಬಾಧಿತ ವ್ಯಕ್ತಿಗೆ ನೇರವಾಗಿ ಪಾವತಿಸುವಂತೆ ಅಥವಾ ನ್ಯಾಯಾಲಯದಲ್ಲಿ ಠೇವಣಿ ಇಡುವಂತೆ ಎದುರುದಾರನ ನಿಯೋಜಕನಿಗೆ ಅಥವಾ ಸಾಲಗಾರನಿಗೆ ನಿರ್ದೇಶಿಸಬಹುದು.

**21. ಅಭಿರಕ್ಷೆಯ ಆದೇಶಗಳು.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ರಕ್ಷಣಾದೇಶಕ್ಕಾಗಿ ಅಥವಾ ಇತರ ಯಾವುದೇ ಪರಿಹಾರಕ್ಕಾಗಿ ಸಲ್ಲಿಸಿದ ಅರ್ಜಿಯ ವಿಚಾರಣೆಯ ಯಾವುದೇ ಹಂತದಲ್ಲಿ ಮ್ಯಾಜಿಸ್ಟ್ರೇಟನು, ಬಾಧಿತ ವ್ಯಕ್ತಿಯ ಯಾವುದೇ ಮಗುವಿಗೆ ಅಥವಾ ಮಕ್ಕಳಿಗೆ ಅಥವಾ ಆಕೆಯ ಪರವಾಗಿ ಅರ್ಜಿ ಸಲ್ಲಿಸುವ ವ್ಯಕ್ತಿಗೆ ತಾತ್ಕಾಲಿಕ ಅಭಿರಕ್ಷೆಯನ್ನು ಮಂಜೂರು ಮಾಡತಕ್ಕದ್ದು ಮತ್ತು ಅಗತ್ಯವಾದರೆ, ಎದುರುದಾರನಿಗೆ ಅಂತಹ ಮಗುವನ್ನು ಅಥವಾ ಮಕ್ಕಳನ್ನು ಭೇಟಿಯಾಗಲು ನಿರ್ದಿಷ್ಟ ಏರ್ಪಾಟು ಮಾಡಬಹುದು:

ಪರಂತು, ಎದುರುದಾರನ ಯಾವುದೇ ಭೇಟಿಯಿಂದ ಮಗುವಿನ ಅಥವಾ ಮಕ್ಕಳ ಹಿತಾಸಕ್ತಿಗೆ ಹಾನಿಯಾಗಬಹುದೆಂದು ಮ್ಯಾಜಿಸ್ಟ್ರೇಟನು ಅಭಿಪ್ರಾಯಪಟ್ಟರೆ ಮ್ಯಾಜಿಸ್ಟ್ರೇಟನು ಅಂತಹ ಭೇಟಿಗೆ ಅನುಮತಿಯನ್ನು ತಿರಸ್ಕರಿಸತಕ್ಕದ್ದು.

**22. ನಷ್ಟ ಪರಿಹಾರ ಆದೇಶಗಳು.–** ಈ ಅಧಿನಿಯಮದ ಮೇರೆಗೆ ಮಂಜೂರು ಮಾಡಬಹುದಾದ ಇತರ ಪರಿಹಾರಗಳ ಜೊತೆಗೆ, ಬಾಧಿತ ವ್ಯಕ್ತಿಯು ಸಲ್ಲಿಸುವ ಅರ್ಜಿಯ ಮೇಲೆ ಮ್ಯಾಜಿಸ್ಟ್ರೇಟನು, ಆ ಎದುರುದಾರನು ಎಸಗಿದ ಗೃಹ ಸಂಬಂಧೀ ಹಿಂಸೆಯ ಕೃತ್ಯಗಳಿಂದುಂಟಾದ ಮಾನಸಿಕ ಹಿಂಸೆ ಮತ್ತು ಭಾವನಾತ್ಮಕ ಯಾತನೆಯೂ ಸೇರಿದಂತೆ ಕ್ಷತಿಗಳಿಗಾಗಿ ನಷ್ಟ ಪರಿಹಾರವನ್ನು ಮತ್ತು ಹಾನಿ ಪರಿಹಾರವನ್ನು ಸಂದಾಯ ಮಾಡುವಂತೆ ಎದುರುದಾರನಿಗೆ ನಿರ್ದೇಶಿಸಿ ಆದೇಶವನ್ನು ಹೊರಡಿಸತಕ್ಕದ್ದು.

**23. ಮಧ್ಯಕಾಲೀನ ಮತ್ತು ಏಕಪಕ್ಷೀಯ ಆದೇಶಗಳನ್ನು ಮಾಡಲು ಅಧಿಕಾರ.–** (1) ಈ ಅಧಿನಿಯಮದ ಮೇರೆಗೆ ತನ್ನ ಮುಂದಿರುವ ಯಾವುದೇ ವ್ಯವಹರಣೆಯಲ್ಲಿ, ಮ್ಯಾಜಿಸ್ಟ್ರೇಟನು ತಾನು ನ್ಯಾಯಸಮ್ಮತವೆಂದು ಮತ್ತು ಉಚಿತವೆಂದು ಭಾವಿಸುವಂತಹ ಮಧ್ಯಕಾಲೀನ ಆದೇಶವನ್ನು ಹೊರಡಿಸಬಹುದು.

(2) ಎದುರುದಾರನು ಗೃಹ ಸಂಬಂಧೀ ಹಿಂಸೆಯ ಕೃತ್ಯವನ್ನು ಎಸಗುತ್ತಿದ್ದಾನೆಂದು ಅಥವಾ ಎಸಗಿದ್ದಾನೆಂದು ಅಥವಾ ಎದುರುದಾರನ ಗೃಹ ಸಂಬಂಧೀ ಹಿಂಸೆಯ ಕೃತ್ಯವನ್ನು ಎಸಗುವ ಸಂಭವವಿರುವುದೆಂದು ಅರ್ಜಿಯಲ್ಲಿ ಹೇಳಿರುವುದು ಮ್ಯಾಜಿಸ್ಟ್ರೇಟನಿಗೆ ಮೇಲ್ನೋಟಕ್ಕೆ ಮನವರಿಕೆಯಾದರೆ, 18ನೇ ಪ್ರಕರಣದ, 20ನೇ ಪ್ರಕರಣದ, 21ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿರುವ, ಬಾಧಿತ ವ್ಯಕ್ತಿಯ ಅಫಿಡಾವಿಟ್‌ನ ಆಧಾರದ ಮೇಲೆ ಅಥವಾ ಸಂದರ್ಭಾನುಸಾರ 22ನೇ ಪ್ರಕರಣದ ಮೇರೆಗೆ ಎದುರುದಾರನ ವಿರುದ್ಧ ಮ್ಯಾಜಿಸ್ಟ್ರೇಟನು ಏಕಪಕ್ಷೀಯ ಆದೇಶವನ್ನು ಮಂಜೂರು ಮಾಡಬಹುದು.

**24. ಆದೇಶದ ಪ್ರತಿಗಳನ್ನು ನ್ಯಾಯಾಲಯವು ಉಚಿತವಾಗಿ ನೀಡುವುದು.–** ಮ್ಯಾಜಿಸ್ಟ್ರೇಟನು, ತಾನು ಈ ಅಧಿನಿಯಮದ ಮೇರೆಗೆ ಯಾವುದೇ ಆದೇಶವನ್ನು ಹೊರಡಿಸುವ ಎಲ್ಲ ಮೊಕದ್ದಮೆಗಳಲ್ಲಿ, ಅಂತಹ ಆದೇಶದ ಒಂದು ಪ್ರತಿಯನ್ನು, ಅರ್ಜಿಯ ಎಲ್ಲಾ ಪಕ್ಷಕಾರರಿಗೆ, ಯಾವ ಮ್ಯಾಜಿಸ್ಟ್ರೇಟನನ್ನು ಕೋರಲಾಗಿತ್ತೋ ಆ ಮ್ಯಾಜಿಸ್ಟ್ರೇಟನ ಅಧಿಕಾರ ವ್ಯಾಪ್ತಿಯಲ್ಲಿರುವ ಪೊಲೀಸ್ ಠಾಣೆಯ ಪ್ರಭಾರೀ ಪೊಲೀಸ್ ಅಧಿಕಾರಿಗೆ ಹಾಗೂ ನ್ಯಾಯಾಲಯದ ಸ್ಥಳೀಯ ವ್ಯಾಪ್ತಿಯೊಳಗಿರುವ ಯಾವುದೇ ಸೇವಾಸಂಸ್ಥೆಗೆ ಮತ್ತು ಯಾವುದೇ ಸೇವಾ ಸಂಸ್ಥೆಯು ಗೃಹ ಸಂಬಂಧೀ ಘಟನಾ ವರದಿಯನ್ನು ನೋಂದಾಯಿಸಿಕೊಂಡಿದ್ದರೆ, ಆ ಸೇವಾಸಂಸ್ಥೆಗೆ ಉಚಿತವಾಗಿ ನೀಡುವಂತೆ ಆದೇಶಿಸತಕ್ಕದ್ದು.

**25. ಆದೇಶಗಳ ಅವಧಿ ಮತ್ತು ಮಾರ್ಪಾಡು.–** (1) 18ನೇ ಪ್ರಕರಣದ ಮೇರೆಗೆ ಮಾಡಿದ ರಕ್ಷಣಾ ಆದೇಶವು, ಬಾಧಿತ ವ್ಯಕ್ತಿಯು ಅದನ್ನು ರದ್ದುಗೊಳಿಸುವಂತೆ ಕೋರಿ ಅರ್ಜಿ ಸಲ್ಲಿಸುವವರೆಗೂ ಜಾರಿಯಲ್ಲಿರತಕ್ಕದ್ದು.

(2) ಬಾಧಿತ ವ್ಯಕ್ತಿಯಿಂದ ಅಥವಾ ಎದುರುದಾರನಿಂದ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ ಈ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಆದೇಶದ ಮಾರ್ಪಾಡು, ಬದಲಾವಣೆ ಅಥವಾ

ರದ್ದಿಯಾತಿಯು ಅಗತ್ಯವಿರುವ ಸಂದರ್ಭಗಳಲ್ಲಿ ಮಾರ್ಪಾಡು ಮಾಡಬೇಕೆಂದು ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ, ಅವನು ತಾನು ಸೂಕ್ತವೆಂದು ಭಾವಿಸುವಂತಹ ಆದೇಶವನ್ನು ಹೊರಡಿಸಬಹುದು.

**26. ಇತರ ದಾವೆಗಳಲ್ಲಿ ಮತ್ತು ಕಾನೂನು ವ್ಯವಹರಣೆಗಳಲ್ಲಿ ಪರಿಹಾರ.**- (1) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಥವಾ ತರುವಾಯ ವ್ಯವಹರಣೆಯನ್ನು ಪ್ರಾರಂಭಿಸಿದ್ದರೂ, ಬಾಧಿತ ವ್ಯಕ್ತಿಗೆ ಮತ್ತು ಎದುರುದಾರನಿಗೆ ಸಂಬಂಧಿಸಿದಂತೆ 18, 19, 20, 21 ಹಾಗೂ 22ನೇ ಪ್ರಕರಣಗಳ ಮೇರೆಗೆ ಲಭ್ಯವಾಗಬಹುದಾದ ಯಾವುದೇ ಪರಿಹಾರವನ್ನು, ಸಿವಿಲ್ ನ್ಯಾಯಾಲಯದ, ಕೌಟುಂಬಿಕ ನ್ಯಾಯಾಲಯದ ಅಥವಾ ಕ್ರಿಮಿನಲ್ ನ್ಯಾಯಾಲಯದ ಮುಂದೆ ಯಾವುದೇ ಕಾನೂನು ವ್ಯವಹರಣೆಯಲ್ಲಿ ಸಹ ಕೋರಬಹುದು.

(2) ಬಾಧಿತ ವ್ಯಕ್ತಿಯು ಸಿವಿಲ್ ಅಥವಾ ಕ್ರಿಮಿನಲ್ ನ್ಯಾಯಾಲಯದ ಮುಂದಿರುವಂತಹ ದಾವೆಯಲ್ಲಿ ಅಥವಾ ಕಾನೂನು ವ್ಯವಹರಣೆಯಲ್ಲಿ ಕೋರಬಹುದಾದ ಯಾವುದೇ ಇತರ ಪರಿಹಾರಕ್ಕೆ ಹೆಚ್ಚಿಗೆಯಾಗಿ ಮತ್ತು ಅದರೊಂದಿಗೆ (1)ನೇ ಉಪ-ಪ್ರಕರಣದಲ್ಲಿ ಹೇಳಲಾದ ಯಾವುದೇ ಪರಿಹಾರವನ್ನು ಕೋರಬಹುದು.

(3) ಈ ಅಧಿನಿಯಮದ ಮೇರೆಗಿನ ವ್ಯವಹರಣೆಯಲ್ಲದ ಇತರ ಯಾವುದೇ ವ್ಯವಹರಣೆಗಳಲ್ಲಿ ಬಾಧಿತ ವ್ಯಕ್ತಿಯು ಯಾವುದೇ ಪರಿಹಾರವನ್ನು ಪಡೆದುಕೊಂಡಿದ್ದ ಸಂದರ್ಭದಲ್ಲಿ, ಅಂತಹ ಪರಿಹಾರವನ್ನು ಮಂಜೂರು ಮಾಡಿರುವ ಬಗೆಗಿನ ಮಾಹಿತಿಯನ್ನು ಮ್ಯಾಜಿಸ್ಟ್ರೇಟನಿಗೆ ತಿಳಿಸಲು ಆಕೆ ಬದ್ಧಳಾಗಿರತಕ್ಕದ್ದು.

**27. ಅಧಿಕಾರ ವ್ಯಾಪ್ತಿ.**- (1) ಯಾವ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನು ಅಥವಾ ಮಹಾನಗರ ಮ್ಯಾಜಿಸ್ಟ್ರೇಟನು ನ್ಯಾಯಾಲಯದ ಪ್ರಾದೇಶಿಕ ಮಿತಿಯೊಳಗೆ,-

(ಎ) ಬಾಧಿತ ವ್ಯಕ್ತಿಯು ಖಾಯಂ ಆಗಿ ಅಥವಾ ತಾತ್ಕಾಲಿಕವಾಗಿ ವಾಸವಿರುವಲ್ಲಿ ಅಥವಾ ವ್ಯವಹಾರ ನಿರ್ವಹಿಸುತ್ತಿರುವಲ್ಲಿ ಅಥವಾ ನಿಯೋಜಿತನಾಗಿರುವಲ್ಲಿ; ಅಥವಾ

(ಬಿ) ಎದುರುದಾರನು ವಾಸವಿರುವಲ್ಲಿ ಅಥವಾ ವ್ಯವಹಾರ ನಿರ್ವಹಿಸುತ್ತಿರುವಲ್ಲಿ ಅಥವಾ ನಿಯೋಜಿತನಾಗಿರುವಲ್ಲಿ; ಅಥವಾ

(ಸಿ) ವ್ಯಾಜ್ಯ ಕಾರಣವು ಉದ್ಭವವಾಗಿರುವಲ್ಲಿ

- ಆ ನ್ಯಾಯಾಲಯವು, ಸಂದರ್ಭಾನುಸಾರ, ಈ ಅಧಿನಿಯಮದ ಆದೇಶದ ಮೇರೆಗೆ ರಕ್ಷಣಾ ಆದೇಶವನ್ನು ಮತ್ತು ಇತರ ಆದೇಶಗಳನ್ನು ಮಂಜೂರು ಮಾಡಲು ಮತ್ತು ಈ ಅಧಿನಿಯಮದ ಮೇರೆಗೆ ಅಪರಾಧಗಳ ಅಧಿವಿಚಾರಣೆ ಮಾಡಲು ಸಕ್ಷಮ ನ್ಯಾಯಾಲಯವಾಗಿರತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಆದೇಶವು, ಭಾರತದಾದ್ಯಂತ ಜಾರಿಗೊಳಿಸುವಂಥದ್ದು ಆಗಿರತಕ್ಕದ್ದು.

**28. ಕಾರ್ಯವಿಧಾನ.**- ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, 12, 18, 19, 20, 21, 22 ಮತ್ತು 23ನೇ ಪ್ರಕರಣಗಳ ಮೇರೆಗಿನ ಎಲ್ಲ ವ್ಯವಹರಣೆಗಳಿಗೆ ಮತ್ತು 31ನೇ ಪ್ರಕರಣದ ಮೇರೆಗಿನ ಅಪರಾಧಗಳಿಗೆ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳು ಅನ್ವಯವಾಗತಕ್ಕದ್ದು.

(2) (1)ನೇ ಉಪ-ಪ್ರಕರಣದಲ್ಲಿರುವುದು ಯಾವುದೂ, 12ನೇ ಪ್ರಕರಣದ ಮೇರೆಗಿನ ಅಥವಾ 23ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗಿನ ಅರ್ಜಿಯ ವಿಲೆಗಾಗಿ, ತನ್ನದೇ ಆದ ಕಾರ್ಯವಿಧಾನವನ್ನು ಗೊತ್ತುಪಡಿಸಿಕೊಳ್ಳಲು ನ್ಯಾಯಾಲಯವನ್ನು ಪ್ರತಿಬಂಧಿಸತಕ್ಕದ್ದಲ್ಲ.

**29. ಅಪೀಲು.**-ಮ್ಯಾಜಿಸ್ಟ್ರೇಟನು ಮಾಡಿದ ಆದೇಶವನ್ನು ಸಂದರ್ಭಾನುಸಾರ ಬಾಧಿತ ವ್ಯಕ್ತಿಗೆ ಅಥವಾ ಎದುರುದಾರನಿಗೆ ಜಾರಿ ಮಾಡಿದ ದಿನಾಂಕದಿಂದ, ಇದರಲ್ಲಿ ಯಾವುದು ನಂತರದ್ದೋ ಆ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸೆಷನ್ಸ್ ನ್ಯಾಯಾಲಯಕ್ಕೆ ಅಪೀಲು ಮಾಡುವ ಅವಕಾಶವಿರತಕ್ಕದ್ದು.

## ಅಧ್ಯಾಯ – V

### ಸಂಕೀರ್ಣ

30. **ರಕ್ಷಣಾಧಿಕಾರಿಗಳು ಮತ್ತು ಸೇವಾಸಂಸ್ಥೆಯ ಸದಸ್ಯರು ಲೋಕನೌಕರರಾಗಿರುವುದು.**– ಈ ಅಧಿನಿಯಮದ ಯಾವುವೇ ಉಪಬಂಧಗಳ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ಯಾವುವೇ ನಿಯಮಗಳ ಅಥವಾ ಆದೇಶಗಳ ಮೇರೆಗೆ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಕಾರ್ಯ ನಿರ್ವಹಿಸುತ್ತಿರುವುದಾಗಿ ತಾತ್ಪರ್ಯವಾಗುವ ರಕ್ಷಣಾಧಿಕಾರಿಗಳನ್ನು ಮತ್ತು ಸೇವಾಸಂಸ್ಥೆಯ ಸದಸ್ಯರನ್ನು ಭಾರತ ದಂಡಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರೆಂದು ಭಾವಿಸತಕ್ಕದ್ದು.

31. **ರಕ್ಷಣಾದೇಶವನ್ನು ಉಲ್ಲಂಘಿಸುವ ಎದುರುದಾರನಿಗೆ ದಂಡನೆ.**– (1) ರಕ್ಷಣಾದೇಶವನ್ನು, ಅಥವಾ ಮಧ್ಯಕಾಲೀನ ರಕ್ಷಣಾದೇಶವನ್ನು ಎದುರುದಾರನು ಉಲ್ಲಂಘಿಸಿದರೆ, ಆ ಉಲ್ಲಂಘನೆಯು ಅಧಿನಿಯಮದ ಮೇರೆಗೆ ಅಪರಾಧವಾಗಿರತಕ್ಕದ್ದು ಮತ್ತು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ ದಂಡನೀಯವಾಗತಕ್ಕದ್ದು.

(2) ಮ್ಯಾಜಿಸ್ಟ್ರೇಟನು ಮಾಡಿದ ಯಾವ ಆದೇಶವನ್ನು ಆಪಾದಿತನು ಭಂಗ ಮಾಡಿದ್ದಾನೆಂದು ಆರೋಪಿಸಲಾಗಿದೆಯೋ ಆ ಆದೇಶವನ್ನು ಮಾಡಿದ ಮ್ಯಾಜಿಸ್ಟ್ರೇಟನು ಸಾಧ್ಯವಾದಷ್ಟುಮಟ್ಟಿಗೆ (1)ನೇ ಉಪ–ಪ್ರಕರಣದ ಮೇರೆಗಿನ ಅಪರಾಧವನ್ನು ಅಧಿವಿಚಾರಣೆ ನಡೆಸತಕ್ಕದ್ದು.

(3) (1)ನೇ ಉಪ–ಪ್ರಕರಣದ ಮೇರೆಗೆ ಆರೋಪಗಳನ್ನು ರೂಪಿಸುವಾಗ, ಮ್ಯಾಜಿಸ್ಟ್ರೇಟನು ಸಂದರ್ಭಾನುಸಾರ, ಭಾರತ ದಂಡ ಸಂಹಿತೆಯ (1860ರ 45) 498ಎ ಪ್ರಕರಣದ ಅಥವಾ ಆ ಸಂಹಿತೆಯ ಅಥವಾ ವಧು–ವರದಕ್ಷಿಣೆ ನಿಷೇಧ ಅಧಿನಿಯಮ, 1961 (1961ರ 28)ರ ಯಾವುದೇ ಇತರ ಉಪಬಂಧಗಳ ಮೇರೆಗೆ, ಆ ಉಪಬಂಧಗಳ ಮೇರೆಗೆ ಅಪರಾಧ ಎಸಗಿರುವುದನ್ನು ವಾಸ್ತವಾಂಶಗಳು ಬಹಿರಂಗಪಡಿಸಿದರೆ, ಆ ಅಪರಾಧಗಳ ಬಗ್ಗೆಯೂ ಸಹ ಆರೋಪಗಳನ್ನು ರೂಪಿಸಬಹುದು.

32. **ಸಂಜ್ಞೇಯತೆ ಮತ್ತು ರುಜುವಾತು.**– (1) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಒಳಗೊಂಡಿದ್ದರೂ, 31ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗಿನ ಅಪರಾಧವು ಸಂಜ್ಞೇಯವಾದುದು ಮತ್ತು ಜಾಮೀನೀಯವಲ್ಲದ ಅಪರಾಧವಾಗಿರತಕ್ಕದ್ದು.

(2) ಬಾಧಿತ ವ್ಯಕ್ತಿಯ ಏಕಮಾತ್ರ ಸಾಕ್ಷ್ಯದ ಮೇಲೆ, ನ್ಯಾಯಾಲಯವು, ಆಪಾದಿತನು 31ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಅಪರಾಧ ಎಸಗಿದ್ದಾನೆಂದು ನಿರ್ಣಯಿಸಬಹುದು.

33. **ರಕ್ಷಣಾಧಿಕಾರಿಯು ಕರ್ತವ್ಯವನ್ನು ನಿರ್ವಹಿಸದಿರುವುದಕ್ಕೆ ದಂಡನೆ.**– ರಕ್ಷಣಾದೇಶದಲ್ಲಿನ ಮ್ಯಾಜಿಸ್ಟ್ರೇಟನ ನಿರ್ದೇಶನದಂತೆ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಯಾರೇ ರಕ್ಷಣಾಧಿಕಾರಿಯು ಯಾವುದೇ ಸಮರ್ಪಕ ಕಾರಣವಿಲ್ಲದೆ, ವಿಫಲನಾದರೆ ಅಥವಾ ತಿರಸ್ಕರಿಸಿದರೆ, ಆತನು ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ, ಅಥವಾ ಅವೆರೆಡರಿಂದಲೂ ದಂಡಿತನಾಗತಕ್ಕದ್ದು.

34. **ರಕ್ಷಣಾಧಿಕಾರಿಯು ಎಸಗಿದ ಅಪರಾಧದ ಸಂಜ್ಞೇಯತೆ.**– ರಾಜ್ಯ ಸರ್ಕಾರದ ಅಥವಾ ಈ ಬಗ್ಗೆ ಅದು ಅಧಿಕೃತಗೊಳಿಸಿದ ಅಧಿಕಾರಿಯ ಪೂರ್ವ ಮಂಜೂರಾತಿ ಪಡೆದು ಫಿರ್ಯಾದನ್ನು ಸಲ್ಲಿಸಿದ ಹೊರತು, ರಕ್ಷಣಾಧಿಕಾರಿಯ ವಿರುದ್ಧ ಯಾವುದೇ ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

35. **ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.**– ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಆದೇಶದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದಿಂದ

ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಗಾಗಿ ರಕ್ಷಣಾಧಿಕಾರಿಯ ವಿರುದ್ಧ ಯಾವುದೇ ದಾವೆಯನ್ನು ಹೂಡಲು, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ನಡೆಸಲು ಅವಕಾಶವಿರತಕ್ಕದ್ದಲ್ಲ.

**36. ಅಧಿನಿಯಮವು ಯಾವುದೇ ಇತರ ಕಾನೂನನ್ನು ಕುಂಠಿತಗೊಳಿಸುವಂತೆ ಇರತಕ್ಕದ್ದಲ್ಲ.**– ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೆ ಪೂರಕವಾಗಿ ಇರತಕ್ಕದ್ದೇ ಹೊರತು ಅವುಗಳನ್ನು ಕುಂಠಿತಗೊಳಿಸುವಂತೆ ಅಲ್ಲ.

**37. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.**– (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಧಿಸೂಚನೆಯನ್ನು ಹೊರಡಿಸುವ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂತಹ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) 8ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ರಕ್ಷಣಾಧಿಕಾರಿಯು ಹೊಂದಿರಬೇಕಾದ ಅರ್ಹತೆಗಳು ಮತ್ತು ಅನುಭವ;

(ಬಿ) 8ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ರಕ್ಷಣಾಧಿಕಾರಿಗಳ ಮತ್ತು ಆತನಿಗೆ ಅಧೀನರಾದ ಇತರ ಅಧಿಕಾರಿಗಳ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಸಿ) 9ನೇ ಪ್ರಕರಣದ (1)ನೇ ಉಪ–ಪ್ರಕರಣದ (ಬಿ) ಖಂಡದ ಮೇರೆಗೆ ಕೌಟುಂಬಿಕ ಘಟನೆಯ ವರದಿಯನ್ನು ಸಲ್ಲಿಸಬೇಕಾದ ನಮೂನೆ ಮತ್ತು ರೀತಿ;

(ಡಿ) 9ನೇ ಪ್ರಕರಣದ (1)ನೇ ಉಪ–ಪ್ರಕರಣದ (ಸಿ) ಖಂಡದ ಮೇರೆಗೆ ಮ್ಯಾಜಿಸ್ಟ್ರೇಟನಿಗೆ ರಕ್ಷಣಾ ಆದೇಶಕ್ಕಾಗಿ ಸಲ್ಲಿಸಬೇಕಾದ ಅರ್ಜಿಯ ನಮೂನೆ ಮತ್ತು ರೀತಿ;

(ಇ) 9ನೇ ಪ್ರಕರಣದ (1)ನೇ ಉಪ–ಪ್ರಕರಣದ (ಡಿ) ಖಂಡದ ಮೇರೆಗೆ ಫಿರ್ಯಾದನ್ನು ದಾಖಲು ಮಾಡಬೇಕಾದ ನಮೂನೆ;

(ಎಫ್) 9ನೇ ಪ್ರಕರಣದ (1)ನೇ ಉಪ–ಪ್ರಕರಣದ (ಐ) ಖಂಡದ ಮೇರೆಗೆ ರಕ್ಷಣಾಧಿಕಾರಿಯು ನಿರ್ವಹಿಸಬೇಕಾದ ಇತರ ಕರ್ತವ್ಯಗಳು;

(ಜಿ) 10ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಸೇವಾಸಂಸ್ಥೆಯ ನೋಂದಣಿಯನ್ನು ವಿನಿಯಮಿಸುವ ನಿಯಮಗಳು;

(ಹೆಚ್) ಈ ಅಧಿನಿಯಮದ ಮೇರೆಗೆ ಪರಿಹಾರಗಳನ್ನು ಕೋರಲು 12ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಸಲ್ಲಿಸಬಹುದಾದ ಅರ್ಜಿಯ ನಮೂನೆ ಮತ್ತು ಆ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಅಂಥ ಅರ್ಜಿಯು ಒಳಗೊಂಡಿರಬೇಕಾದ ಆ ವಿವರಗಳು;

(ಐ) 13ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ನೋಟೀಸುಗಳನ್ನು ಜಾರಿ ಮಾಡುವ ವಿಧಾನಗಳು;

(ಜೆ) 13ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ರಕ್ಷಣಾಧಿಕಾರಿಯು ನೋಟೀಸು ಜಾರಿಯಾದ ಬಗ್ಗೆ ನೀಡಬೇಕಾದ ಘೋಷಣೆಯ ನಮೂನೆ;

(ಕೆ) 14ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ, ಸೇವಾಸಂಸ್ಥೆಯ ಸದಸ್ಯನು ಬುದ್ಧಿವಾದ ಹೇಳಲು ಹೊಂದಿರಬೇಕಾದ ಅರ್ಹತೆಗಳು ಮತ್ತು ಅನುಭವ;

(ಎಲ್) 23ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಬಾಧಿತ ವ್ಯಕ್ತಿಯು ಸಲ್ಲಿಸಬಹುದಾದ ಅಫಿಡಾವಿಟ್ಟಿನ ನಮೂನೆ;

(ಎಂ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನವು ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

ವಿ.ಕೆ. ಭಾಸಿನ್
ಕಾರ್ಯದರ್ಶಿ
ಭಾರತ ಸರ್ಕಾರ

* * * * *